"That in line 10 of Clause 5, after the words 'only intermittently' the words or to other establishment of any kind of industry whatsoever shall be inserted"

ತಿದ್ದುಪಡಿ ತಿರಸ್ಕರಿಸಲ್ಪಟ್ಟಿತು

ಖಂಡ—೫

ಅಧ್ಯಕ್ಷರು.—"ಖಂಡ ೫ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೫ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಮೊದಲನೇ ಖಂಡ ಇತ್ಯಾದಿ

ಅಧ್ಯಕ್ಷರು.—"ಪ್ರಸ್ತಾವ ಏನೆಂದರೆ ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಕೆ. ಕಾಂತ (ಮಾನ್ಯ ಕಾರ್ಮಿಕ ಸಚಿವರು).—"೧೯೮೭ನೇ ಸಾಲಿನ ಕೈಗಾರಿಕಾ ವಿವಾದಗಳಿಗೆ (ಕರ್ನಾಟಕ ತಿದ್ದುಪಡಿ) ಸಂಬಂಧಿಸಿದ ವಿಧೇಯಕವನ್ನು ಈ ಸಭೆಯು ತಿದ್ದುಪಡಿಯಾದಂತೆ ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ"

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"೧೯೮೭ನೇ ಸಾಲಿನ ಕೈಗಾರಿಕಾ ವಿವಾದಗಳಿಗೆ (ಕರ್ನಾಟಕ ತಿದ್ದುಪಡಿ) ಸಂಬಂಧಿಸಿದ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು

ಅಧ್ಯಕ್ಷರು.—ನೆಕ್ಸ್ಟ್ ಬಿಲ್ಲನ್ನು ಅರಣ್ಯ ಸಚಿವರು ಮಂಡನೆ ಮಾಡುವುದು

ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕ ೧೯೮೭

ಶ್ರೀ ಜಿ. ಎಸ್. ಬಾಗಲ್‌ಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಸಾಲಿನ ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವುದಕ್ಕೆ (ಒಪ್ಪಂದಗಳ) ಪರಿಷ್ಕರಣೆ ಸಂಬಂಧಿಸಿದ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ನಾನು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಸನ್ಮಾನ್ಯ ಅಧ್ಯಕ್ಷರೇ, ಅರಣ್ಯಶಾಸ್ತ್ರಗಳ ಅಗತ್ಯಗಳನ್ನು ಆಧರಿಸಿ ಉತ್ತಮ ರೀತಿಯಿಂದ ಅರಣ್ಯದ ನಿರ್ವಹಣೆಯನ್ನು ಮಾಡುವ ದೃಷ್ಟಿಯಿಂದ ಅರಣ್ಯದ ಉತ್ಪನ್ನವನ್ನು ನ್ಯಾಯವಾದ ಬೆಲೆಯಲ್ಲಿ ಪಡೆಯಲಿಕ್ಕೆ ಅರಣ್ಯ ಉತ್ಪನ್ನಗಳ ಸರಬರಾಜಿನ ಬಗ್ಗೆ ಈಗಿರುವ ಒಪ್ಪಂದಗಳನ್ನು ಪರಿಷ್ಕರಿಸುವ, ಬದಲಾಯಿಸುವ, ರದ್ದುಪಡಿಸುವ ಅಧಿಕಾರವನ್ನು ಪಡೆಯಲಿಕ್ಕೆ ಕಾನೂನು ಪ್ರಕಾರ ತಂದಿದ್ದೇವೆ. ಇದರಲ್ಲಿ ಮುಖ್ಯವಾಗಿ ಎರಡು ಕಲಂಗಳು ಇವೆ. ಕಲಂ ೩ ಮತ್ತು ೫ ಮೂರನೇ ಕಲಂನಲ್ಲಿ ಇದರಲ್ಲಿ ಪರಿಷ್ಕರಣದ ಬಗ್ಗೆ ಈಗಿರುವ ಒಪ್ಪಂದಗಳನು ಪರಿಷ್ಕರಿಸುವುದು.

ಎರಡನೆಯದು, ಅರಣ್ಯ ಉತ್ಪನ್ನವನ್ನು ಸರಬರಾಜು ಮಾಡಲಿಕ್ಕೆ ಒಪ್ಪಂದ ತೀರ್ಮಾನದ ಬಗ್ಗೆ ಪರಿಷ್ಕರಣ ಮಾಡುವುದು. ಮೂರನೆಯದಾಗಿ, ಈಗ ಹಂಚಿಕೆಯಾದ ಕ್ಷೇತ್ರ ಬದಲಾವಣೆ ಪರಿಮಿತಿಗೊಳಿಸುವುದು ವಗೈರೆ. ಅಲ್ಲದೇ ಅರಣ್ಯ ನಿರ್ವಹಣೆಯಿಂದ ಕೂಡಿದಂಥ ಅಧಿಕಾರವನ್ನು ಪಡೆಯುವುದು ಕೂಡಾ ಇದರಲ್ಲಿ ಇದೆ ಪರಿಸರ ವನ್ಯಜೀವಿಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಕಾಯ್ದೆಯನ್ನು ತರಲಾಗಿದೆ. ಇದರಲ್ಲಿ ಕಲಂ೫ರ ಪ್ರಕಾರ ರಾಜ್ಯ ಸರ್ಕಾರವು ಅರಣ್ಯ ಉತ್ಪನ್ನಗಳ ಬಗ್ಗೆ ಈಗ ಇರುವ ಯಾವುದೇ ಕರಾರನ್ನು ಸಂಸ್ಥೆಗಳವರಿಗೆ ಅವಕಾಶ ಕೊಟ್ಟು ಅಥವಾ ನೋಟೀಸ್ ಕೊಟ್ಟು ಈ ಕರಾರನ್ನು ರದ್ದುಪಡಿಸುವುದು. ಈ ಅಧಿಕಾರವನ್ನು ಕೂಡಾ ಪಡೆಯಲಾಗಿರುತ್ತದೆ. ಇದರಿಂದ ಯಾವುದೇ ತರಹದ ಅನಾನುಕೂಲತೆ ಆಗುವುದಿಲ್ಲ, ಅರಣ್ಯಕ್ಕೆ ಹೆಚ್ಚಿನ ಉತ್ಪನ್ನವನ್ನು ತರಬೇಕು, ಪರಿಸರ ವನ್ಯಜೀವಿಗಳನ್ನು ಕಾಪಾಡತಕ್ಕಂಥ ದೃಷ್ಟಿಯಿಂದ ಈ ಕಾಯ್ದೆಯನ್ನು ತರಲಾಗಿದೆ. ದಯವಿಟ್ಟು ಮಾನ್ಯ ಸದಸ್ಯರು ಇದಕ್ಕೆ ಒಪಿಗೆ ಕೊಡಬೇಕೆಂದು ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

†ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಫಾರೆಸ್ಟ್ ಕಾನೂನಿಗೆ ಮಾನ್ಯ ಸಚಿವರಾದ ಬಾಗಲ್‌ಕೋಟ್‌ರವರು ಅಮೆಂಡ್‌ಮೆಂಟ್ ತಂದಿದ್ದಾರೆ. ಅಮೆಂಡ್‌ಮೆಂಟ್ ಸ್ವಾಗತಾರ್ಹ ಇದ್ದರೂ ಸಹ ಇದರಲ್ಲಿ ಅನೇಕ ಕಲಂಗಳನ್ನು ಅವರು ತಂದಿದ್ದರೆ ಹೆಚ್ಚು ವೇದ್ಯವಾಗುತ್ತಿತ್ತು, ಅವರು ೩ ಮತ್ತು ೫ನೇ ಕಲಂಗಳು ಮಹತ್ವದವು ಇದೆ ಎಂದು ಹೇಳಿದ್ದಾರೆ. ಇದರಲ್ಲಿ ಅವರು ಏನು ಹೇಳಿದ್ದಾರೆಂದರೆ "from the date of enforcement of the Act and thereafter" ಅವರ ಗಮನಕ್ಕೆ ನಾನು ಏನು ತರುತ್ತಿದ್ದೇನೆಂದರೆ ಈ ಮೊದಲೇ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಮಾನ್ಯ ವೀರಪ್ಪ ಮೊಯಿಲಿಯವರ ಅಧ್ಯಕ್ಷತೆಯಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ, ಇದರಲ್ಲಿ ಪ್ರಾಮುಖ್ಯವಾಗಿ ಇವತ್ತಿನ ಬಿಲ್ಲಿಗೆ ಸಂಬಂಧಿಸಿದಂತೆ ಕೆಲವು ರಿಕವರಿ ಆಫ್ ರಾಯಲ್ಟಿ ಎನ್ನುವ ವಿಷಯ ಬಹಳ ಮಹತ್ವದ್ದು. ಇದರಲ್ಲಿ ಏನಾಗಿದೆ, ಹಿಂದಿನ ಕಾನೂನಿಗೆ ಅನುಸಾರವಾಗಿ ಅನೇಕ ಮಂದಿ ಗುತ್ತಿಗೆದಾರರು ಗುತ್ತಿಗೆಯನ್ನು ತೆಗೆದುಕೊಂಡು ಹೆಚ್ಚು ಹಣ ಕೊಡದೇ ಸರ್ಕಾರಕ್ಕೆ ಬಹಳಷ್ಟು ಹಾನಿ ಉಂಟು ಮಾಡುತ್ತಿದ್ದಾರೆ. ಇದರಲ್ಲಿ

> "Government of India spokesman informed the Committee that the Government issued a clarification in September 1983 that bark shall also be charged at the rates applicable to the timber, Thereafter recoveries are being made for bark also. For the period from February 1981 to 1983, Government have taken a decision in June 1984 to waive amount due on bark,"

ಆದರೆ ಇದರಲ್ಲಿ ಕಾನೂನಿನಲ್ಲಿ ಪ್ರಾವಿಷನ್ ಇಲ್ಲದೆ ತೊಡಕಿರುವುದು ಎಷ್ಟು ಹರಿಹರ ಪಾಲಿಫೈಬರ್‌ನಿಂದ ೪೫ ಲಕ್ಷ ಹತ್ತು ಸಾವಿರ ರೂಪಾಯಿಗಳು, ಮೈಸೂರು ಪೇಪರ್ ಮಿಲ್‌ನವರಿಂದ ೧೩ ಲಕ್ಷ ೫೩ ಸಾವಿರ, ವೆಸ್ಟ್ ಕೋಸ್ಟ್ ಪೇಪರ್‌ನವರಿಂದ ೨ ಲಕ್ಷ ೭೦ ಸಾವಿರ, ಪ್ಲೈವುಡ್ ಅಂಡ್ ಮ್ಯಾಚ್‌ವುಡ್ ಫ್ಯಾಕ್ಟರಿ ೪೭ ಲಕ್ಷ ೪೮ ಸಾವಿರ ರೂಪಾಯಿಗಳು ಈ ರೀತಿ ಒಟ್ಟು ೧೦೮ ಲಕ್ಷ ೮೧ ಸಾವಿರ ರೂಪಾಯಿಗಳು ಬಾಕಿ ಬರಬೇಕಾಗಿದೆ, ಈ ಬಾಕಿಯನ್ನು ಸೂಟಿ ಬಿಡುವ ಸಲುವಾಗಿ ತಾವು ಕಾನೂನನ್ನು ಉಪಯೋಗ ಮಾಡುತ್ತೀರೋ ಇಲ್ಲವೋ ಎನ್ನುವ ಭಯ ನಮಗಿದೆ. ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಕರ್ನಾಟಕ ರಾಜ್ಯದಲ್ಲಿ ಬಹಳ ಅತ್ಯುತ್ತಮ ರೀತಿಯಿಂದ ಕೆಲಸ ಮಾಡತಕ್ಕಂಥ ಶಿಸ್ತಿನಿಂದ ಬಂದಂಥ ಒಂದು ಡಿಪಾರ್ಟ್‌ಮೆಂಟ್.

ಇದರಲ್ಲಿ ಅನೇಕ ಕಳವುಗಳು ಆಗುತ್ತಾ ಇವೆ, ಬ್ಲಾಕ್ ಮಾರ್ಕೆಟ್ಸ್ ಆಗುತ್ತಾ ಇದೆ. ಆದರೂ ಸಹ ಉಳಿದ ರಾಜ್ಯಗಳೊಡನೆ ತುಲನೆ ಮಾಡಿ ನೋಡಿದಾಗ ಕರ್ನಾಟಕ ರಾಜ್ಯ ಅರಣ್ಯ ಅಧಿಕಾರಿಗಳು ಪೂರ್ತಿಯಾಗಿ ಪ್ರಾಮಾಣಿಕ ಅಲ್ಲದಿದ್ದರೂ ಸಹ ಬಹಳಷ್ಟು ಖದೀಮರಾಗಿಲ್ಲ. ಎಂಬುದನ್ನು ಒಪ್ಪಲೇಬೇಕು. ಆದರೆ ದುರ್ದೈವವಾಗಿ ರಾಜಕೀಯ ಮುಖಂಡರ ಕೈವಾಡದಿಂದ ಈ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೇಲೆ ಏನು ಪರಿಣಾಮ ಆಗಿದೆ, ಎಂಬುದನ್ನು ನೋಡಬೇಕು, ಫಾರೆಸ್ಟ್ ಲ್ಯಾಂಡ್ ಹಾಳಾಗಿ ಹೋಗುವ ಕಾಲದಲ್ಲಿ ಅಂದರೆ ತಾವು ಮೆಂಬರ್ ಆಗಿದ್ದಾಗ ಇದರ ಬಗ್ಗೆ ಒಂದು ಕಾನೂನು ಮಾಡಿ ಯಾರಿಗೂ ಫಾರೆಸ್ಟ್ ಲ್ಯಾಂಡ್ ಕೊಡಬಾರದೆಂದು ಕಾನೂನು ಮಾಡಿದ್ದೀರಿ.

ಇಡೀ ಅಖಿಲಭಾರತದಲ್ಲಿ ಒಮ್ಮತದಿಂದ ಒಪ್ಪಿ ಎಲ್ಲಾ ಕಡೆ ಕಾನೂನು ಆಗಿತ್ತು. ಈಗ ಸ್ವಲ್ಪ ಆದರೂ ಹೊಲ ಇದೆ. ಉಳಿದಿದ್ದು ಬೆಳೆಯದೆ ಇರತಕ್ಕ ಗಿಡ ಆಗಿ ಹೋಗಿದೆ. ರಾಷ್ಟ್ರ ಮಟ್ಟದಲ್ಲಿ ನೋಡಿದಾಗ ಫಾರೆಸ್ಟ್ ಮಿನಿಮಮ್ ೪೦ ಪರ್ಸೆಂಟ್ ಇರಬೇಕಾಗಿತ್ತು. ಕನಿಷ್ಟ ಪಕ್ಷ ೩೩ ಪರ್ಸೆಂಟ್ ಆದರೂ ಇರಬೇಕು. ಆದರೆ ೧೮ಪರ್ಸೆಂಟ್ ಎಂದು ವರದಿ ಕೊಟ್ಟಿದ್ದಾರೆ, ಅಷ್ಟು ಇಲ್ಲ. ಹಳ್ಳಕೊಳ್ಳ ಎಲ್ಲವನ್ನೂ ಸೇರಿಸಿದರೆ ೧೩ ಪರ್ಸೆಂಟ್ ಇಲ್ಲ. ಮಾನ್ಯ ಬಾಗಲ್‌ಕೋಟ್‌ನವರು ಬರುವಾಗ ೧೦ ಪರ್ಸೆಂಟ್ ಕೂಡ ಇಲ್ಲ ಎಂಬ ಭಯ ನನಗೆ ಇದೆ. ಇದನ್ನು ತಡೆಗಟ್ಟುವ ಸಲುವಾಗಿ ಕಾನೂನನ್ನು ಅಂದರೆ ಮಸೂದೆಯನ್ನು ತಂದರೆ ಅದನ್ನು ನಾನು ಶ್ಲಾಘನೆ ಮಾಡುತ್ತೇನೆ. ಇದು ತಪ್ಪು ಎಂದು ನಾನು ಹೇಳುತ್ತಿಲ್ಲ ಇದನ್ನು ತಂದಿದ್ದೀರಿ ಇರಲಿ ಇವೊತ್ತು ಕೆಲವು ಪೇಪರ್ ಮಿಲ್ಸ್ ತೆಗೆದುಕೊಳ್ಳಿ. ಒಂದು ರೂಪಾಯಿಗೆ ಒಂದು ಟನ್ ಕೊಟ್ಟರೆ ಅವರು ಟನ್ ಒಂದಕ್ಕೆ ೧೫ ರೂಪಾಯಿ ಮಾಡಿಕೊಂಡಿದ್ದಾರೆ. ಈಗ ಅನೇಕ ಕರಾರುಗಳನ್ನು ಹಾಕಿದ್ದಾರೆ. ಅಂದು ಕೊಟ್ಟಂತಹ ಅಗ್ರಿಮೆಂಟ್‌ನಲ್ಲಿ ಇರತಕ್ಕಂತಹ ಕಲಮುಗಳಲ್ಲಿ ಏನು ಇದೆ ಅಂದರೆ ಯಾವುದೋ ಒಂದು ಉಪಯುಕ್ತವಾದಂತಹ ಅಂದರೆ ಅವರಿಗೆ ಅನುಕೂಲವಾದಂತಹ ಕಾರ್ಯಕ್ಕೆ ಸ್ಟೇ ತಂದರು. ಸರ್ಕಾರಕ್ಕೆ ಫಾಯಿದೆ ಆಗುತ್ತದೆ ಎಂದು ಅದನ್ನು ತರಲಿಲ್ಲ. ಇವೊತ್ತು ಅವರಿಗೆ ಒಂದು ರೂಪಾಯಿಗೆ ಒಂದು ಟನ್ ಕೊಟ್ಟರೂ ಸಹಿತ ಅವರು ಹುಟ್ಟುವಳಿ ಮಾಡತಕ್ಕ ಪಲ್ಪ್ ಒಂದು ಭಾಗ ನಮ್ಮ ಸರ್ಕಾರಕ್ಕೆ ಕೊಡಬೇಕು ಎಂಬ ಕರಾರು ಇದ್ದರೂ ಸಹ ಒಬ್ಬ ಮಂತ್ರಿ ಕೂಡ ಅದನ್ನು ಅಮಲಿಗೆ ತರಲಿಕ್ಕೆ ವಿಚಾರ ಮಾಡಲಿಲ್ಲ. ಅಂತಹ ವಿಷಯಗಳಲ್ಲಿ ಅದನ್ನು ಕ್ಯಾನ್ಸಲ್ ಮಾಡಬೇಕಾದರೆ ಅನೇಕ ಕಾನೂನು ತೊಡಕುಗಳು ಬರುತ್ತವೆ, ಆ ತೊಡಕುಗಳನ್ನು ನಿವಾರಣೆ ಮಾಡುವ ಸಲುವಾಗಿ ಇವೊತ್ತು ಶ್ರೀಮಾನ್ ಬಾಗಲ್‌ಕೋಟ್‌ರವರು ಈ ಮಸೂದೆಯನ್ನು ತಂದಿದ್ದಾರೆ, ಅದನ್ನು ನಾವು ಸ್ವಾಗತಿಸೋಣ. ಇವೊತ್ತು ಈ ವೆಸ್‌ಕೋಸ್ಟ್ ಪೇಪರ್ ಮಿಲ್ಸ್‌ನವರ ೪-೫ ಸಂಸ್ಥೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿದ್ದು ಎಲ್ಲಾ ಅರಣ್ಯಗಳನ್ನು ನುಂಗಿ ಹಾಕುತ್ತದೋ ಎಂದು ನನಗನ್ನಿಸುತ್ತದೆ. ಇವೊತ್ತು ವೆಸ್‌ಕೋಸ್ಟ್ ಪೇಪರ್ ಮಿಲ್‌ಗೆ ಬೇಕಾದ ಬೊಂಬುಗಳನ್ನು ಎಲ್ಲಾ ಕಡೆ ಅವರಿಗೆ ಕೊಟ್ಟುಬಿಟ್ಟಿದ್ದೀರಿ. ಬೊಂಬು ಮಾಡುವ ಸಣ್ಣ ಸಣ್ಣ ಮಿಲ್‌ಗಳಿಗೆ ಬೊಂಬು ಕೊಡಲಾರದ ಪರಿಸ್ಥಿತಿ ಬಂದಿದೆ. ಕೆಲವು ಕಡೆ ಆಧುನಿಕ ಪದ್ಧತಿ ಪ್ರಕಾರ ಬೊಂಬುಗಳನ್ನು ಹೆಚ್ಚು ಎತ್ತರ ಬೆಳೆಯಬೇಕೆಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಪ್ರಯತ್ನ ಮಾಡುತ್ತಿದ್ದಾರೆ, ಅದಕ್ಕೆ ಕೂಡ ತಕ್ಕ ಪ್ರೋತ್ಸಾಹ ಸಿಗುತ್ತಿಲ್ಲ. ಇದು ಯಾಕೆ ಆಗಿದೆ ಗೊತ್ತಿಲ್ಲ. ಅನೇಕ ಸ್ಪೀಸೀಸ್‌ಗಳು ಅಲ್ಲೂ ಕೂಡ ತರತಕ್ಕದ್ದು ಅಗತ್ಯವಿದೆ. ಆದರೆ ಇದರ ಬಗ್ಗೆ ಪ್ರಚಾರ ಮಾಡಲಿಲ್ಲ ನನಗೆ ಇದು ಅರ್ಥವಾಗುತ್ತಿಲ್ಲ. ಆದರೆ ಈ ಪೇಪರ್ ಮಿಲ್‌ಗಳಿಗೆ ಕೊಡುವುದು ಮಾತ್ರ ಸತತವಾಗಿ ನಡೆಯುತ್ತಿದೆ. ಇದನ್ನು ತಿರುಗಿ ಕ್ಯಾನ್ಸಲ್ ಮಾಡುವುದಕ್ಕಾಗುವುದಿಲ್ಲ. ಈ ಮಿಲ್ ವಿರುದ್ಧ ನೀವು ಕ್ಯಾನ್ಸಲ್ ಮಾಡಲು ಹೋಗುವುದಿಲ್ಲ. ಏನಾದರೂ ಮೇದರ ಜನರು ಒಂದು ನೂರು ಎರಡು ನೂರು ಬೊಂಬುಗಳನ್ನು ಇಟ್ಟುಕೊಂಡಿದ್ದರೆ ಅವನಿಗೆ ಕೊಟ್ಟ ಅಗ್ರಿಮೆಂಟ್ ಅನ್ನು ಕ್ಯಾನ್ಸಲ್ ಮಾಡುತ್ತಿದ್ದೀರಿ, ವಿನಹ ದೊಡ್ಡ ಇಂಡಸ್ಟ್ರಿಯಲ್ ಲಿಸ್ಟ್‌ಗಳನ್ನು ತಡೆಯುವ ಧೈರ್ಯದ ಕೆಲಸ ಮಾತ್ರ ನೀವು ಮಾಡುವುದಿಲ್ಲ ಎಂದು ನಿಶ್ಚಯವಾಗಿ ಹೇಳುತ್ತೇನೆ. ಈ ವಿಷಯದಲ್ಲಿ ಮಾನ್ಯ ಮಂತ್ರಿಯವರು ಈ ಸದನದಲ್ಲಿ ಆಶ್ವಾಸನೆ ಕೊಟ್ಟರೆ ಮಾತ್ರ ನೆಟ್ಟಗಾಗುತ್ತದೆ ಎಂದು ಹಾರೈಸುತ್ತೇನೆ.

ಹರಿಹರದ ಪಾಲಿಫೈಬರ್‌ಗೆ ಯಾವ ಉದ್ದೇಶ ಇಟ್ಟುಕೊಂಡು ಎಷ್ಟೋ ಏರಿಯಾ ಕೊಟ್ಟಿದ್ದೀರಿ ? ಇವೊತ್ತು ಇಲ್ಲಿ ಏನು ಆಗಿದೆ ಅಂದರೆ ಒಂದು ಭಯಂಕರ ಚಿತ್ರ ಇಲ್ಲಿ ಉಂಟಾಗಿದೆ. ಯೂಕಲಿಪ್ಟಸ್ ತಳಿಗಳು ಎಲ್ಲಾ ಹರಿಹರ ಪಾಲಿಫೈಬರ್‌ಗೆ ಹೋಗುತ್ತಾ ಇದೆ. ಯೂಕಲಿಪ್ಟಸ್ ಬಗ್ಗೆ ಸಂದೇಹಾತ್ಮಕ ಪ್ರಶ್ನೆಗೆ ಯಾರೂ ಉತ್ತರ ಹೇಳಲಿಕ್ಕೆ ಹೋಗಿಲ್ಲ. ಇವೊತ್ತು ಯೂಕಲಿಪ್ಟಸ್ ತಳಿಯಿಂದ ಮಳೆ ಹೋಗುತ್ತದೆ. ಇದು ನಿಜವೋ ಅಲ್ಲವೋ ಇದರ ಬಗ್ಗೆ ಸ್ಪಷ್ಟವಾದ ರೀತಿಯಿಂದ ಜನರಿಗೆ ಹೇಳಲಿಕ್ಕೆ ಹಿಂಜರಿಯುತ್ತಿದ್ದೀರಿ. ಆದರೆ ಅಲ್ಲಿ ಯೂಕಲಿಪ್ಟಸ್ ಹಚ್ಚದಿದ್ದರೆ ಇಮ್ಮೀಡಿಯಟ್ ಆಗಿ ಅವರಿಗೆ ಕೊಡತಕ್ಕ ಉತ್ಪನ್ನಗಳು ಬರುವುದಿಲ್ಲ. ಇಂಡಸ್ಟ್ರಿಯಲಿಸ್ಟ್‌ಗಳಿಗೆ ಕೊಡಬೇಕಾದಂತಹ ಯೂಕಲಿಪ್ಟಸ್ ಬೆಳೆಯಲಿಕ್ಕೆ ಅರ್ಜೆಂಟ್ ಆಗಿ ಬರುವಂತಹ ಸ್ಪಿಸೀಸ್‌ಗಳನ್ನು ಮತ್ತೆ ಹೆಚ್ಚು ಬೆಳೆಯುತ್ತಾ ಇದ್ದೀರಿ. ಅಲ್ಲಿ ಮಂದಿ ಮಿಶ್ರಣ, ಗಾಳಿ ಮಿಶ್ರಣ, ಕರಪ್ಷನ್ ಮಿಶ್ರಣ ಎಲ್ಲಾ ಆಗುತ್ತದೆ. ಎಲ್ಲಾ ದೃಷ್ಟಿಯಿಂದ ನಾವು ಈಗ ಆಲೋಚನೆ ಮಾಡುವಂತಹ ಪ್ರಸಂಗ ಬಂದಿದೆ. ಈಗ ನಮ್ಮದೇ ಆದಂಥ ಮೈಸೂರು ಪೇಪರ್ ಮಿಲ್ಸ್ ಏನಿದೆ, ಅಲ್ಲಿ ತಯಾರು ಆಗು

ವಂತಹ ಪೇಪರ್‌ನ್ನು ಪೂರ್ತಿಯಾಗಿ ನಾವು ಉಪಯೋಗಮಾಡುವುದಕ್ಕಾಗುವುದಿಲ್ಲವೆಂದು ನಾನು ಮಂತ್ರಿಯಾಗಿದ್ದಾಗಲೇ ಹೇಳಿದ್ದೆ. ಆದ್ದರಿಂದ ಇಲ್ಲಿ ತಯಾರಾಗುತ್ತಿರುವ ಪೇಪರ್ಸ್ ಪೈಕಿ ಎಷ್ಟನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ ಮತ್ತು ಈ ಮಿಲ್‌ನ ವಶಕ್ಕೆ ಕೊಟ್ಟಿರುವ ಜಮೀನುಗಳ ವಿವರಗಳನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಒಟ್ಟಿನಲ್ಲಿ ನಮ್ಮ ರಾಜ್ಯದ ಅರಣ್ಯ ಸಂಪತ್ತು ಹಾಳಾಗುತ್ತಿದೆ ಎಂಬ ಭಾವನೆ ಎಲ್ಲರಲ್ಲಿಯೂ ಬರುತ್ತಿದೆ. ಈಗ ತಂದಿರುವ ವಿಧೇಯಕದಲ್ಲಿ ಕೊಟ್ಟಿರುವಂತಹ ಗುತ್ತಿಗೆಯನ್ನು ರದ್ದು ಮಾಡುವಂತಹ ಅಧಿಕಾರವನ್ನು ಸರ್ಕಾರ ಪಡೆದುಕೊಳ್ಳುತ್ತಿವೆ. ಈ ಒಂದು ಅಧಿಕಾರವನ್ನು ಸದುಪಯೋಗ ಪಡಿಸಿಕೊಳ್ಳುವಂತಹ ಧೈರ್ಯ ಮಂತ್ರಿಗಳಿಗೆ ಬರಬೇಕು, ಇದರ ಜೊತೆಗೆ ಅಧಿಕಾರಿಗಳು ಸಹ ಪ್ರಾಮಾಣಿಕ ರೀತಿಯಿಂದ ಕೆಲಸ ಮಾಡಬೇಕು. ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತು ಇಂದು ಯಾವ ಸ್ಥಿತಿಗೆ ಬಂದಿದೆ ಎಂದರೆ, ಸಾಕಷ್ಟು ಪ್ರಮಾಣದಲ್ಲಿ ಅರಣ್ಯದ ನಾಶವಾಗಿದೆ. ಒಂದು ಕಾಲದಲ್ಲಿ ಕೊಡಗು ಜಿಲ್ಲೆ ಅರಣ್ಯ ಸಂಪತ್ತಿನಿಂದ ಕೂಡಿತ್ತು. ಆದರೆ ನಾನು ಇತ್ತೀಚೆಗೆ ಮಂಗಳೂರಿನಿಂದ ವಾಪಸ್ ಬರುವಾಗ ಕೊಡಗಿನ ಮೇಲೆ ಬರಬೇಕಾಯಿತು. ಆಗ ನಾನು ದಾರಿ ತಪ್ಪಿ ಬೇರೆ ಬಸ್ಸಿನಲ್ಲಿ ಬಂದಿರಬೇಕೆಂದು ನನಗನಿಸಿತು. ಏಕೆಂದರೆ, ರಸ್ತೆಯ ಎಡಬಲಗಳಲ್ಲಿ ಎಲ್ಲಿ ನೋಡಿದರೂ ಮರಗಳೇ ಇರಲಿಲ್ಲ. ಅಲ್ಲೊಂದು ಇಲ್ಲೊಂದು ಕಿತ್ತಲೆಹಣ್ಣಿನ ತೋಟಗಳು ಮಾತ್ರ ಕಾಣುತ್ತಿದ್ದುವು. ಅಲ್ಲಿ ಇದ್ದಂಥ ಅರಣ್ಯವೆಲ್ಲಾ ಮಾಯವಾಗಿತ್ತು, ಇದಕ್ಕೆ ಯಾರು ಕಾರಣರು ? ಇದನ್ನು ಸಂಶೋಧನೆ ಮಾಡುವ ಶಕ್ತಿ ಈ ಮಂತ್ರಿಮಂಡಲಕ್ಕೆ ಇದೆಯೇ ? ಇದನ್ನು ನಾನು ಪ್ರಶ್ನೆ ಮಾಡುತ್ತೇನೆ. ಈಗಿನ ಮಂತ್ರಿಮಂಡಲವೇ ಈ ಅನಾಹುತಕ್ಕೆಲ್ಲಾ ಕಾರಣವೆಂದು ನಾನು ಹೇಳುವುದಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮೊದಲು ಸಹ ಸಾಕಷ್ಟು ಅನಾಹುತಗಳು ನಡೆದಿವೆ. ಆದ್ದರಿಂದ ಯಾರು ಯಾರು ಇದಕ್ಕೆಲ್ಲಾ ಕಾರಣರು ಎಂಬುದನ್ನು ಬಯಲಿಗೆಳೆಯಬೇಕು. ಈಗ ಜನರು ನಿಮಗೆ ಅಧಿಕಾರ ಕೊಟ್ಟಿದ್ದಾರೆ. ಈ ಅಧಿಕಾರ ಎಂಬುದು ನಿಮ್ಮ ಕೈಯಲ್ಲಿ ಬಹಳ ದಿವಸ ಇರುವುದಿಲ್ಲ. ಇದು ಒಮ್ಮೆ ಇರುತ್ತದೆ, ಒಮ್ಮೆ ಹೋಗುತ್ತದೆ. ಆದರೆ ನೀವು ಮಾಡುವಂತಹ ಒಳ್ಳೆಯ ಕೆಲಸಗಳು ಮಾತ್ರ ಬಹಳ ದಿವಸಗಳ ಕಾಲ ಉಳಿಯುತ್ತದೆ. ನಿಮ್ಮ ಮಕ್ಕಳನ್ನು ಯಾರಾದರು ಕೊಂದರೆ ನಿಮಗೆ ಅವರ ಮೇಲೆ ಯಾವ ರೀತಿ ಸಿಟ್ಟು ಬರುತ್ತದೋ, ಅದೇರೀತಿ ಯಾರಾದರೂ ಒಂದು ಗಿಡ ಕಿತ್ತರೆ, ಅವರ ಮೇಲೂ ಸಹ ಅಷ್ಟೇ ಸಿಟ್ಟು ನಿಮಗೆ ಬರಬೇಕು. ಈ ಹಿಂದೆ ನಾನು ಮಂತ್ರಿಯಾಗಿದ್ದಾಗ ಕಾರವಾರ ಜಿಲ್ಲೆಯಲ್ಲಿ ಒಂದು ಆನೆ ಕಾಡು ಬಿಟ್ಟು ಊರಿಗೆ ಪ್ರವೇಶ ಮಾಡಿದೆ ಎಂಬ ವಿಚಾರ ತಿಳಿದು ಬಂತು. ಆ ಸಮಯದಲ್ಲಿ ಅಲ್ಲಿನ ಎಂ. ಎಲ್. ಎ. ಆಗಿದ್ದ ಶ್ರೀ ಕದಂ ಅವರು ಹಾಗೂ ಇನ್ನಿತರರು ನನ್ನ ಬಳಿ ಬಂದು ಆ ಆನೆಯನ್ನು ಕೊಲ್ಲಿಸಬೇಕೆಂದು ಸಲಹೆ ಮಾಡಿದಾಗ ನಾನು ಅವರಿಗೆ ಈ ವಿಚಾರದಲ್ಲಿ ಕೈ ಹಾಕುವುದಕ್ಕೆ ಸಾಧ್ಯವಿಲ್ಲ. ಆನೆ ಯೋಗ್ಯವಾದ ಕೆಲಸ ಮಾಡಿದೆ, ಜನರೇ ತಪ್ಪು ಕೆಲಸ ಮಾಡಿದ್ದಾರೆಂದು ಹೇಳಿದೆ. ನಂತರ ಆಗಿನ ಮುಖ್ಯಮಂತ್ರಿಗಳು ಈ ಬಗ್ಗೆ ಏನು ಮಾಡಬೇಕೆಂದು ನನ್ನನ್ನು ಕೇಳಿದಾಗ, ನಾನು ಅವರಿಗೆ ಅರಣ್ಯ ಪ್ರದೇಶ ಆನೆಗೆ ಸೇರಿದ್ದು, ಆದರೆ ಆ ಪ್ರದೇಶದೊಳಕ್ಕೆ ಜನರು ನುಗ್ಗಿ ಆ ಜಾಗವನ್ನು ಸ್ವಾಧೀನಪಡಿಸಿಕೊಂಡ ಕಾರಣ, ಆನೆಗೆ ಅಲ್ಲಿರಲು ಜಾಗವಿಲ್ಲದೆ ಊರಿನೊಳಕ್ಕೆ ಪ್ರವೇಶ ಮಾಡಿದೆ, ಆದ್ದರಿಂದ ಕಾಡು ಪ್ರಾಣಿಗಳು ಕಾಡಿನಲ್ಲಿ ಇರುವುದಕ್ಕೆ ಅವಕಾಶ ಕೊಡದ ಜನರ ಕೈಗಳನ್ನು ಕತ್ತರಿಸಬೇಕು ಎಂದು ಹೇಳಿದೆ. ಅಂದರೆ ಮನುಷ್ಯರ ಕೈಗಳನ್ನು ಕತ್ತರಿಸಬೇಕು ಎಂದು ಇದರ ಅರ್ಥವಲ್ಲ, ಇರುವ ಕಾಡನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರಬೇಕು ಎಂಬುದು ನನ್ನ ಮಾತಿನ ಅರ್ಥ. ಕೇಂದ್ರದವರು ನಿಮ್ಮಿಂದ ಅರಣ್ಯದ ಬೆಳವಣಿಗೆ ಬಗ್ಗೆ ಏನಾದರೂ ಕೇಳಿದರೆ ಎಲ್ಲ ಕಡೆಯೂ ಕಾಡನ್ನು ಬೆಳೆಸಲಾಗುತ್ತಿದೆ ಎಂದು ವಿವರಣೆ ಕೊಡುತ್ತೀರಿ. ಆದರೆ ಕೆಲಸ ಮಾತ್ರ ನಡೆಯುತ್ತಿಲ್ಲ. ಪ್ಲಾಂಟೇಷನ್ ಬಗ್ಗೆ ಬಹಳಷ್ಟು ಹೇಳುತ್ತೀರಿ. ಹಾಗಿದ್ದರೆ ನೀವು ಇಷ್ಟೊಂದು ಹಣ ಖರ್ಚು ಮಾಡಿ ಬೆಳೆಸಿದಂಥ ಗಿಡಗಳೆಲ್ಲಾ ಏನಾದವು ನೀವು ಕಾಡನ್ನು ಬೆಳೆಸದಿದ್ದರೆ ಏನು ಪ್ರಯೋಜನ ? ಇದರ ಬಗ್ಗೆ ನೀವು ಪರಿಶೋಧನೆ ನಡೆಸಬೇಕು ? ನಮ್ಮ ಇತಿಹಾಸವನ್ನು ತೆಗೆದು ನೋಡಿದಾಗ ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಹೆಚ್ಚಿನ ಕಾಡು ಪ್ರದೇಶಗಳಿದ್ದು ಅಲ್ಲಿ ಹುಲಿಗಳು, ಸಿಂಹಗಳು, ಜಿಂಕೆಗಳು ಹಾಗೂ ಇನ್ನಿತರ ಕಾಡುಪ್ರಾಣಿಗಳು ವಾಸವಾಗಿದ್ದುವು, ಆದರೆ ಇಂದು ಅಲ್ಲೆಲ್ಲಾ ಇದ್ದ ಕಾಡು ಹಾಳಾಗಿ ಬಟ್ಟಬಯಲಿನಂತೆ ಕಾಣುತ್ತಿದೆ. ತುಮಕೂರಿನ ಶಿವಗಂಗೆ ಬೆಟ್ಟದ ಸುತ್ತಮುತ್ತ ಹಾಗೂ ಚಿತ್ರದುರ್ಗದ ಸುತ್ತಮುತ್ತ ಉತ್ತಮವಾದ ಅರಣ್ಯವನ್ನು ಬೆಳೆಸಬಹುದು, ಆದರೆ ದುರ್ದೈವದಿಂದ ಇದು ನಿಮ್ಮ ಕಣ್ಣಿಗೆ ಕಾಣುತ್ತಿಲ್ಲ.

೪–೩೦ ಪಿ. ಎಂ.

ಗದಗ್ ತಾಲ್ಲೂಕಿನಲ್ಲಿ ೩೦ ಮೈಲಿ ಸಂತ್ತ ಫಾರೆಸ್ಟ್ ಬೆಳೆಸಲಿಕ್ಕೆ ಸಾಧ್ಯವಿದೆ ಎಂದು ಎಷ್ಟು ಸಲ ಹೇಳಿದರೂ ಇಲ್ಲಿಯತನಕ ಆಗಲೊಲ್ಲದು. ಮೊನ್ನೆ ಮಾನ್ಯ ಮಂತ್ರಿಗಳು ಹೋಗಿ ನೋಡಿದ್ದಾರೆ ಎಂದು ಕೇಳಿದ್ದೇನೆ. ಅಲ್ಲಿ ಇನ್‌ಸ್ಟ್ರಕ್ಷನ್ಸ್ ಕೊಟ್ಟು ಬಂದಿರಬಹುದು ಎಂದು ನಾನು ಭಾವಿಸಿದ್ದೇನೆ. ಹಿಂದಿನ ಕಾಲದಲ್ಲಿ ಬ್ರಿಟಿಷರ ಕಾಲದಲ್ಲಿ ಫಾರೆಸ್ಟ್‌ನಲ್ಲಿ ಯಾವ ರೂಢಿಯನ್ನು ಅನುಸರಿಸುತ್ತಿದ್ದರು ಎನ್ನುವುದನ್ನು ನಾವು ನೋಡಬೇಕು. ಕಾರವಾರದಲ್ಲಿ ಹೋಗಿ ನೋಡಿದರೆ ೪-೫-೬ ಮೈಲಿಗೆ ಒಂದೊಂದು ಫಾರೆಸ್ಟ್ ಬಂಗಲೊ ಕಟ್ಟಿಸಿದ್ದಾರೆ. ಈ ರೀತಿ ಏಕೆ ಕಟ್ಟಿಸಿದರು ಎಂದು ವಿಚಾರ ಮಾಡಿದರೆ ತಿಳಿಯಿತು, ಮುಂಜಾನೆ ೬ ಗಂಟೆಗೆ ಚಹಾ ತೆಗೆದುಕೊಂಡು ನಡೆದುಕೊಂಡು ಬರಬೇಕು, ಬ್ರೇಕ್‌ಫಾಸ್ಟ್ ಹೊತ್ತಿಗೆ ಒಂದು ಬಂಗಲೆಗೆ ಬರಬೇಕು, ನಂತರ ಅಲ್ಲಿಂದ ಊಟದ ಹೊತ್ತಿಗೆ ಇನ್ನೊಂದು ಬಂಗಲೆಗೆ ಬರಬೇಕು, ಅನಂತರ ಸಂಜೆ ಮುಂದೆ ಇನ್ನೊಂದು ಬಂಗಲೆಗೆ ಹೋಗಬೇಕು ಎಂಬ ಉದ್ದೇಶದಿಂದ ಕಟ್ಟಿಸಿದ್ದಾರೆಂದು ತಿಳಿಯಿತು. ಈರೀತಿ ದೊಡ್ಡ ದೊಡ್ಡ ಅಧಿಕಾರಿಗಳು ಪ್ರತಿಯೊಂದು ಗಿಡವನ್ನೂ ಪರೀಕ್ಷೆಮಾಡಿ, ವಿಮರ್ಷೆ ಮಾಡಿ ಬರೆಯುವಂಥ ಸಂಪ್ರದಾಯ ಆವತ್ತು ಇತ್ತು, ಇವತ್ತು ಏನಾಗಿದೆ ಅಂದರೆ ಸಂಪೂರ್ಣವಾಗಿ ಗಿಡಗಳು ನಾಶವಾಗಲಿಕ್ಕೆ ಹತ್ತಿದೆ. ಇವತ್ತು ಸೋಪ್ ಫ್ಯಾಕ್ಟರಿಯು ಸಮಸ್ಯೆ ಬಗೆಹರಿಯಲಾರದಂಥ ಸಮಸ್ಯೆಯಾಗಿದೆ. ಇವತ್ತು ಲಾಭವಾಗುವಂಥ ಸ್ಥಿತಿ ಇರಬಹುದು ಇರತಕ್ಕಂಥ ಸ್ಯಾಂಡಲ್‌ವುಡ್ ಆಯಿಲನ್ನು ಪಡೆದು ಸ್ಯಾಂಡಲ್‌ವುಡ್ ಸೋಪ್ ಮಾಡಿ ಸೋಪ್ ಫ್ಯಾಕ್ಟರಿಗೆ ಇವತ್ತು ಲಾಭವಾಗಿದೆ ಎಂದು ತೋರಿಸುವಂಥ ಪ್ರವೃತ್ತಿಯಾಗಿದೆ. ಅರಣ್ಯದ ಯಾವುದೇ ವಸ್ತುವನ್ನು ಬಹಿರಂಗವಾಗಿ ಹರಾಜು ಹಾಕಿ ಕನಿಷ್ಟ ಅದರ ೨—೩ ಅಂಶವನ್ನು ಫಾರೆಸ್ಟ್ ಡೆವಲಪ್‌ಮೆಂಟಿಗೆ ತೆಗೆದರೆ ಅನುಕೂಲವಾಗುತ್ತದೆ. ಆರೀತಿ ಮಾಡಿದರೆ ಸರ್ಕಾರ ನಿಜವಾಗಿ ಕೆಲಸ ಮಾಡಿದಹಾಗೆ ಆಗುತ್ತದೆ. ಇಲ್ಲದಿದ್ದರೆ ಕಾನೂನು ಮಾಡಿದ ಹಾಗೆ ಆಗುವುದಿಲ್ಲ. ನಾವು ಲ್ಯಾಂಡ್ ಅನ್ನು ಯಾರಿಗೂ ಕೊಡಬಾರದು, ಕೊಟ್ಟರೆ ಸಿಕ್ಕುವುದಿಲ್ಲ ಎಂದು ಕಾನೂನು ಮಾಡಿದೆವು. ಆದರೆ ಆ ಕಾನೂನನ್ನು ಜಾಣರು ದುರುಪಯೋಗ ಮಾಡಿಕೊಂಡು ಲೀಸ್‌ಗೆ ಕೊಡೋಣ ಎಂದು ಮಾಡಿದರು. ಅಲ್ಲಿ ಗಿಡ ಕಡಿಯಬಾರದು ಎಂದು ನಮ್ಮ ಅಭಿಪ್ರಾಯ ಇದ್ದರೆ, ಅಲ್ಲಿ ಗಿಡ ಇದ್ದರೇನು, ಹೋದರೇನು ಎಂಬುದು ಮತ್ತೊಬ್ಬರ ಅಭಿಪ್ರಾಯ ಇರಬಹುದು. ಮಾನ್ಯ ರೆವಿನ್ಯೂ ಸಚಿವರು ಇದ್ದಾರೆ, ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಫಾರೆಸ್ಟ್ ಲ್ಯಾಂಡ್ ಬಹಳ ಕಡಿಮೆ ಯಾಗಲಿಕ್ಕೆ ಹತ್ತಿದೆ. ರೆವಿನ್ಯೂ ಲ್ಯಾಂಡನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಲಿಕ್ಕೇ ಬೇಕು. ಇಲ್ಲದಿದ್ದರೆ ದೇಶದಲ್ಲಿ ಬರ ಎಂದೂ ತಪ್ಪಿದ್ದಲ್ಲ. ಹಿಂದೆ ಬೀದರ್‌ನಲ್ಲಿ ಯಾವ ಸ್ಥಿತಿ ಇತ್ತೋ, ಆ ಪರಿಸ್ಥಿತಿ ಕೂರ್ಗ್, ಮೈಸೂರು ಮತ್ತು ಬೆಂಗಳೂರಿಗೂ ಬಂದಿದೆ. ಬೆಂಗಳೂರಿನ ಕ್ಲೈಮೇಟ್ ನೋಡಿದರೆ ಪ್ರತಿವರ್ಷ ಬಿರುಸಾಗಲಿಕ್ಕೆ ಹತ್ತಿದೆ. ಇದಕ್ಕೆ ಕಾರಣ ನಮ್ಮಲ್ಲಿ ಗಿಡಗಳು ಇಲ್ಲ. ಇಂತಹ ಸ್ಥಿತಿ ಬೆಂಗಳೂರಿಗೆ ಬಂದಿದೆ. ಆದ್ದರಿಂದ ತಮಗೆ ಹೇಳುತ್ತಾ ಇದ್ದೇನೆ, ಎಲ್ಲೆಲ್ಲಿ ಸಾಧ್ಯವಿದೆ, ಎಲ್ಲೆಲ್ಲಿ ರೆವಿನ್ಯೂ ಲ್ಯಾಂಡ್ ಇದೆ, ಅದನ್ನು ಹತ್ತಾರು ತೋಟಗಳನ್ನು ಬೆಳೆಸುವುದಕ್ಕೆ ಕೊಟ್ಟರೆ ೩-೪ ಕೋಟಿ ಜನತೆಗೆ ಕಲ್ಯಾಣ ಮಾಡಿದ ಶ್ರೇಯಸ್ಸು ನಿಮಗೆ ಬರುತ್ತದೆ. ಮಾನ್ಯ ಅರಣ್ಯ ಮಂತ್ರಿಗಳಾದ ಬಾಗಲಕೋಟೆಯವರು ಈ ಬಗ್ಗೆ ಸ್ಟ್ರಿಕ್ಟಾಗಿ ಹೇಳಿದ್ದಾರೆ ಫಾರೆಸ್ಟ್‌ನ ಯಾವುದೇ ಅಧಿಕಾರಿ ಲೋಪ ದೋಷಗಳನ್ನು ಮಾಡಿದರೆ ಅವನನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಲೇಬೇಕು. ಅವನ ಮೇಲೆ ಯೋಗ್ಯವಾದಂಥ ಕ್ರಮಗಳನ್ನು ಕೈಗೊಳ್ಳಲೇಬೇಕು ಎಂದು ಅವರು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಾನು ಫಾರೆಸ್ಟ್ ಮಿನಿಸ್ಟರ್ ಇದ್ದಾಗ ಹೇಳಿದೆ, ಫಾರೆಸ್ಟ್ ಗಾರ್ಡ್ಸ್‌ನ್ನು ಕೇಳುವವರಿಲ್ಲ, ಲೇಬರ್ಸ್ ಆರ್ಗನೈಸೇಷನ್ ಮಾಡಿಕೊಂಡು ಸಂರಕ್ಷಣೆ ಮಾಡುವುದಕ್ಕೆ ಬರುತ್ತಾರೆ, ಪೋಲೀಸ್ ಅಧಿಕಾರಿಗಳು ಕ್ಲಬ್ ಮಾಡಿಕೊಂಡು ಸಂರಕ್ಷಣೆ ಮಾಡುವುದಕ್ಕೆ ಬರುತ್ತಾರೆ. ಫಾರೆಸ್ಟ್‌ನಲ್ಲಿರತಕ್ಕಂಥ ದೊಡ್ಡ ದೊಡ್ಡ ಅಧಿಕಾರಿಗಳು ರಕ್ಷಣೆ ಮಾಡಿಕೊಳ್ಳುತ್ತಾರೆ. ಆದರೆ ಫಾರೆಸ್ಟ್‌ನಲ್ಲಿರತಕ್ಕಂಥ ಗಾರ್ಡ್ಸ್‌ನ್ನು ರಕ್ಷಣೆ ಮಾಡುವುದಕ್ಕೆ ಯಾರೂ ಬರುವುದಿಲ್ಲ. ಅವನು ಇಲ್ಲದಿದ್ದರೆ ಫಾರೆಸ್ಟ್ ಉಳಿಯುವುದಿಲ್ಲ. ಅವನಿಗೆ ಕೊಡತಕ್ಕಂಥ ಪಗಾರ ಏರಿಸಲಿ. ಫಾರೆಸ್ಟ್ ಗಾರ್ಡ್ಸ್‌ಗಳಿಗೆ ಮನೆಗಳನ್ನು ಕಟ್ಟಿ ಅದರ ಹಿಂದುಮುಂದೆ ಕೂಡ ಕನಿಷ್ಟ ೫ ಹಣ್ಣಿನ ಗಿಡಗಳನ್ನು ಹಚ್ಚಿಸಿ, ಅದರಿಂದ ಬಂದಂಥ ಉತ್ಪನ್ನವನ್ನು ಅವನೇ ತೆಗೆದುಕೊಳ್ಳಲಿಕ್ಕೆ ಅವಕಾಶ

ಕೊಡಿ. ಅಲ್ಲದೆ ಅಲ್ಲಲ್ಲಿ ಜೇನಿನ ಬುಟ್ಟಿಗಳನ್ನು ಇಟ್ಟು, ಆ ಜೇನನ್ನೂ ಅವನು ಪಡೆದುಕೊಳ್ಳುವ ಹಾಗೆ ಮಾಡಿದರೆ ಅವನ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತದೆ.

ಒಬ್ಬೊಬ್ಬರಿಗೆ ಒಂದೊಂದು ಆಕಳು ಕೊಡಿ, ಅದರಿಂದ ಬರತಕ್ಕ ಹಾಲಿನ ಉತ್ಪನ್ನವನ್ನು ಅವರೇ ತೆಗೆದುಕೊಳ್ಳಲಿ. ಅದರ ಲೆಕ್ಕವನ್ನು ಇಡುವುದಕ್ಕೆ ಹೋಗಬೇಡಿ. ಇದರಿಂದ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಇದರಿಂದ ಯಾವುದೇ ರೀತಿಯ ಭಾರತ ಸರ್ಕಾರಕ್ಕೆ ಬರುವುದಿಲ್ಲ. ಫಾರೆಸ್ಟ್ ಗಾರ್ಡ್‌ಗಳ ವಿಚಾರದಲ್ಲಿ ಮಾನ್ಯ ಮಂತ್ರಿಯವರಾದ ಬಾಗಲಕೋಟ್‌ರವರು ಹೆಚ್ಚು ಕಾಳಜಿವಹಿಸಬೇಕೆಂದು ವಿನಂತಿಸುತ್ತೇನೆ. ಸಿನಿಯೋ ರೇಂಜ್ ರೇಟ್ ವಿಚಾರದಲ್ಲಿ ಪಿ. ಎ. ಸಿ. ಯವರು ಕೂಡ ಪ್ರಸ್ತಾಪ ಮಾಡಿದ್ದಾರೆ ಇದಕ್ಕೆ ಸಂಬಂಧಪಟ್ಟಂತೆ ನಿಯಮಾವಳಿಗಳನ್ನು ಬದಲಾವಣೆ ಮಾಡಿ, ರೇಟನ್ನು ಫಿಕ್ಸ್ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಇದರಿಂದ ಕೋಟಿಗಟ್ಟಲೆ ರೊಕ್ಕ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಬರುತ್ತದೆ. ಇದು ಸಾಮಾನ್ಯ ಜನರಿಗೆ ಗೊತ್ತಾಗುವುದಿಲ್ಲ. ಸರ್ಕಾರದವರು ಇಂಥ ವಿಚಾರಗಳಲ್ಲಿ ಹೆಚ್ಚು ನಿಗಾವಹಿಸಬೇಕೆಂದು ಹೇಳುತ್ತೇನೆ. ನನಗೆ ತಿಳಿದಿರುವಂತೆ ಮಿಲಿಟರಿ ತರುವಾಯ ಡಿಸಿಪ್ಲಿನಿನಲ್ಲಿ ಅರಣ್ಯ ಇಲಾಖೆ ಇರುತ್ತದೆ. ಅರಣ್ಯ ಇಲಾಖೆ ಹೆಚ್ಚು ವಂದನೆಗೆ ಅರ್ಹವಾದಂಥ ಇಲಾಖೆ. ಪೋಲಿಸಿನವರಿಗಿಂತ ಹೆಚ್ಚು ಶ್ರಮವಹಿಸಿ ಕಾಡಿನಲ್ಲಿ ದುಡಿಯಬೇಕಾಗುತ್ತದೆ. ಕಾಡು ಮೃಗಗಳ ಜೊತೆ ಇರಬೇಕಾಗುತ್ತದೆ. ಇವರಿಗೆ ಮಾನವೀಯ ದೃಷ್ಟಿಯಿಂದ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಈ ಒಂದು ಇಲಾಖೆಯಲ್ಲಿ ಬರತಕ್ಕ ಉತ್ಪತ್ತಿಯಲ್ಲಿ ೫೦ ಭಾಗವನ್ನು ಅದರ ಅಭಿವೃದ್ಧಿಗೆ ಬಳಸಬೇಕು. ಈ ಇಲಾಖೆಯಲ್ಲಿ ಕೊರತೆ ಬರುವುದಕ್ಕೆ ಸಾಧ್ಯವಿಲ್ಲ. ಇದರಿಂದ ಸರ್ಕಾರವನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆ. ಪ್ರಾಪರ್ ಆಗಿ ಪ್ಲಾನಿಂಗ್ ಆಗಬೇಕು. ಇವತ್ತು ಸುದೈವದಿಂದ ಉತ್ತಮರಾದಂಥ ಸಿ.ಸಿ.ಎಫ್ ನಿಮಗೆ ಸಿಕ್ಕಿದ್ದಾರೆ. ಹಿಂದಿನ ಕಾಲದಲ್ಲಿ ಯಾವರೀತಿಯಲ್ಲಿ ಅರಣ್ಯಇತ್ತೋ, ಅದೇ ಮಾದರಿಯಲ್ಲಿ ನಮ್ಮಲ್ಲಿ ಈಗ ಅರಣ್ಯ ಬರುವಂತೆ ತಕ್ಕ ಏರ್ಪಾಡು ಮಾಡಿಕೊಳ್ಳಬೇಕು. ನಾನು ಗದಗ್ ಕ್ಷೇತ್ರದಿಂದ ಬರುತ್ತಿದ್ದೇನೆ, ಅಲ್ಲಿ ಒಂದು ಕಪ್ಪದ ಗುಡ್ಡ ಎಂದು ಇದೆ. ಹಿಂದೆ ಬ್ರಿಟೀಷನವರು ಇದ್ದಾಗ ಅಲ್ಲಿ ಹುಲ್ಲಿ, ಚಿರತೆ ಕರಡಿಗಳು ಸಾಕಷ್ಟು ಇದ್ದವು. ಇವತ್ತು ಅಲ್ಲಿ ಒಂದು ಇರುವೆ ಕೂಡ ಇಲ್ಲದಂತಾಗಿ ಬಯಲು ಪ್ರದೇಶವಾಗಿದೆ. ಇವತ್ತು ಬಂಗಾರದ ಗಣಿ ಎನ್ನುವ ಕಡೆ ಬಂಗಾರ ಸಿಕ್ಕಿದರೂ ಸಿಗಬಹುದು. ಆದರೆ, ವನಸಿರಿ ಮಾತ್ರ ಸಿಗುವುದಿಲ್ಲ. ನಮ್ಮ ಭಾಗದ ಲಕ್ಕುಂಡಿ ಹಾಗೂ ಇತರೇ ಪ್ರದೇಶಗಳು ಖಾಯಂ ಆಗಿ ಬರಗಾಲ ಪ್ರದೇಶಗಳಾಗಿವೆ. ಅಲ್ಲಿ ಮಳೆ ಬಿದ್ದರೆ ನಮ್ಮ ಪುಣ್ಯ ಎಂದು ಹೇಳಬೇಕಾದ ಪರಿಸ್ಥಿತಿ ಇದೆ. ನಾವು ಅಧಿಕಾರದಲ್ಲಿದ್ದಾಗ ನಮ್ಮ ತಾಲ್ಲೂಕಿನ ಅಭಿವೃದ್ಧಿಯನ್ನು ಮಾಡಿದರೆ ಅಪವಾದ ಬರುತ್ತದೆಂದು ಮಾಡಲಿಲ್ಲ. ನೀವು ಇವತ್ತು ಅರಣ್ಯವನ್ನು ಹೆಚ್ಚು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ನಿಮಗೆ ಬೇಕಾಗಿರುವಂಥ ಸಂಪೂರ್ಣ ಸಹಾಯವನ್ನು ನಾವು ಕೊಡುತ್ತೇವೆ.

ಅಧ್ಯಕ್ಷರೆ, ಇನ್ನೊಂದು ವಿಚಾರ ಅಂದರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕಾಗಿದೆ. ಗದಗ್‌ನಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಒಂದು ಜೂ ಮಾಡಿದ್ದೇವೆ ಅದೇ ಶ್ರೀಮತಿ ನಾಗರತ್ನಮ್ಮನವರ ಊರಿನಲ್ಲಿ ಆದರೆ ಅವರಿಗೆ ಬೇಕಾದಷ್ಟು ಸೌಲಭ್ಯಗಳು ಸಿಕ್ಕುತ್ತದೆ, ಆದರೆ ನಮ್ಮ ಗದಗ್‌ಗೆ ಅಷ್ಟು ಸೌಲಭ್ಯಗಳು ಸಿಕ್ಕುತ್ತಿಲ್ಲ. ಅಲ್ಲದೇ ಆ ಭಾಗಗಳಲ್ಲಿ ಒಂದು ಜೂ ಕೂಡ ಇಲ್ಲ. ಧಾರವಾಡ, ಬಿಜಾಪುರ, ಬೆಳಗಾಂ, ಕಾರವಾರ್, ನೀವು ಯಾವುದನೇ ನೋಡಿ ಜೂ ಮಾಡಲಿಕ್ಕೆ ನಿಮ್ಮ ಅಧಿಕಾರಿಗಳು ಹಣ ಕೊಡುವುದಿಲ್ಲವೋ ಅಥವಾ ನಿಮ್ಮ ಅಧಿಕಾರಿಗಳು ಅಯೋಗ್ಯರು ಇದ್ದಾರೋ ಏನೋ ನನಗೆ ಗೊತ್ತಾಗುತ್ತಿಲ್ಲ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬೇಕಾದಂಥ ರೀತಿಯಲ್ಲಿ ಸೌಲಭ್ಯ ಮಾಡುತ್ತೇವೆಂದು ಹೇಳುತ್ತಾರೆ ಹರಿಹರ ಪಾಲಿಫೈಬರ್ಸ್ ಮತ್ತು ಮೈಸೂರು ಪೇಪರ್ ಮಿಲ್‌ನವರಿಗೆ ಕೋಟಿ ಗಟ್ಟಲೆ ಹಣವನ್ನು ಉದರಿ ಕೊಡಲಿಕ್ಕೆ ಹೋಗುತ್ತಾರೆ. ಇಲ್ಲಿ ೧೦-೧೨ ಲಕ್ಷ ರೂಪಾಯಿ ಕೊಟ್ಟರೆ ಅದು ಪೂರ್ತಿಯಾಗುತ್ತದೆ. ಇಲ್ಲದೇ ಇದ್ದರೆ ಅದು ಅರ್ಧಂಭರ್ಧ ಆಗುತ್ತದೆ ಈಗ ನಮ್ಮ ಕಡೆಯಲ್ಲಿ ಚಿಗರಿ ಬಿಟ್ಟಿದ್ದೇವೆಂದು ಹೇಳುತ್ತಾರೆ. ಜನರು ಚಿಗರಿಯನ್ನು ನೋಡಿಲ್ಲವೇನು ? ಅವರ ಹೊಲಗಳಲ್ಲೆಲ್ಲಾ ಚಿಗರಿಗಳು ಇರುತ್ತವೆ. ಅದರಿಂದ ಜನರಿಗೆ ಮನೋರಂಜನೆ ಆಗಬೇಕು. ಇದು ಒಂದು ಪ್ರದೇಶಕ್ಕೆ ಕಾನ್ಸೆಂಟ್ರೇಷನ್ ಆಗಬಾರದು ಇದು ಕರ್ನಾಟಕ ರಾಜ್ಯದ ಎಲ್ಲಾ ಕಡೆಗಳಲ್ಲಿ ಹಬ್ಬಬೇಕು. ಶಿವಮೊಗ್ಗದಲ್ಲಿ ಅದೇ ರೀತಿ ಮಾಡಿದ್ದೀರಿ. ಶಿರಸಿಯಲ್ಲಿ ಇತ್ತು. ಆದ್ದರಿಂದ, ಇದಕ್ಕೆ ಬೇಕಾದಂಥ ಸೌಲಭ್ಯಗಳನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಿ.

ಇದಕ್ಕೆ ನಾಳೆ ಎಂದು ಹೇಳಬಾರದು, ತೀವ್ರವಾಗಿ ಈ ಕಡೆ ಗಮನ ಕೊಡಬೇಕು. ಇನ್ನು ಬೆಂಕಿಕಟ್ಟೆ ಗುಡ್ಡದಲ್ಲಿ ಒಂದು ಫಾರೆಸ್ಟ್ ಲಾಡ್ಜ್ ಕಟ್ಟುತ್ತೇವೆಂದು ಹೇಳಿದ್ದಿರಿ. ಅದರ ಬಗ್ಗೆ ತಾವು ಮೊನ್ನೆ ಆದೇಶ ಕೊಟ್ಟು ಬಂದಿದ್ದೇನೆ ಎಂದು ಹೇಳಿದ್ದಿರಿ, ಅಲ್ಲಿ ಅಧಿಕಾರಿಗಳನ್ನು ಕೇಳಿದರೆ ರೊಕ್ಕ ಇಲ್ಲ ಎಂದು ಹೇಳುತ್ತಾರೆ. ಇದರಿಂದ ನಾವು ಮಂತ್ರಿಗಳ ಮಾತನ್ನು ಅಧಿಕಾರಿಗಳು ಕೇಳಲಿಕ್ಕೆ ಸಮರ್ಥರಿಲ್ಲ ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ತೀವ್ರವಾಗಿ ಈ ಕೆಲಸಗಳನ್ನು ತೆಗೆದುಕೊಂಡು ಮಾಡಿಕೊಡಬೇಕೆಂದು ಕೇಳಿಕೊಂಡು ಈ ಬಿಲ್ಲನ್ನು ನಾನು ಒಪ್ಪಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ.ಎಸ್. ಆಚಾರ್(ಬೈಂದೂರು).—ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕದ ಬಗ್ಗೆ ಮಾಜಿ ಅರಣ್ಯ ಸಚಿವರಾದ ಶ್ರೀ ಕೆ.ಹೆಚ್. ಪಾಟೀಲ್ ಅವರು ಕೆಲವು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಪುಷ್ಟೀಕರಣವನ್ನು ಕೊಡುತ್ತಾ ಈ ವಿಧೇಯಕವನ್ನು ಮಾಡುವಾಗ ಉಂಟಾದಂಥ ವಿಧೇಯಕ ರಚನೆಯಲ್ಲಿ ಡ್ರಾಫ್ಟ್ ಮಾಡುವಾಗ ಆದಂಥ ಕೆಲವು ಅನುಮಾನಗಳು ಏನು ನನಗೆ ತೋರಿವೆ ಅದಕ್ಕೆ ಮಾತ್ರ ನನ್ನ ಮಾತನ್ನು ಕೇಂದ್ರೀಕರಿಸುತ್ತೇನೆ. ಈ ವಿಧೇಯಕದ ೩. (ಎ)ನಲ್ಲಿ ಅಂಥ ಒಪ್ಪಂದದಲ್ಲಿ ಮಾರಾಟ ಮಾಡಬೇಕೆಂದು ಅಥವಾ ಸರಬರಾಜು ಮಾಡಬೇಕೆಂದು ಒಪ್ಪಂದ ಮಾಡಿಕೊಳ್ಳಲಾದ ಅರಣ್ಯ ಉತ್ಪನ್ನದ ಬೆಲೆಯ ಪರಿಷ್ಕರಣೆ ಅಥವಾ ನಿಯತಕಾಲಿಕ ಪರಿಷ್ಕರಣೆ ಮಾಡುವಂಥ ಅಧಿಕಾರ ಸರ್ಕಾರಕ್ಕೆ ಬರುತ್ತದೆ. ಹಾಗೆಯೇ ಪರಿಷ್ಕರಣೆಯ ಅವಧಿಯನ್ನು ಕಡಿಮೆಗೊಳಿಸಲು ಅಥವಾ ಹೆಚ್ಚು ಮಾಡಲು ಉಪಬಂಧ ಕಲ್ಪಿಸುತ್ತದೆ ಪರಿಷ್ಕರಣ ಅಂದರೆ ರಿವಿಜನ್. ಈ ರಿವಿಜನ್ ಮಾಡುವಾಗ ಕಾಲವನ್ನು ಹೆಚ್ಚು ಕಡಿಮೆ ಮಾಡಿದ ಹಾಗೆ ಮೌಲ್ಯವನ್ನು ಕೂಡ ಹೆಚ್ಚು ಕಡಿಮೆ ಮಾಡಲಿಕ್ಕೆ ಬರುತ್ತದೆ ಕಡಿಮೆ ಮಾಡಿದ ಹಾಗೆ ಸರ್ಕಾರಕ್ಕೆ ಲುಕ್ಸಾನು ಆಗುತ್ತದೆ. ಇಂತಹ ವ್ಯವಸ್ಥೆ ಒಳ್ಳೆಯದಲ್ಲ. ಇಂತಹ ಅಗ್ರಿಮೆಂಟ್‌ನಲ್ಲಿ ಅನಪೇಕ್ಷಿತ ವ್ಯಕ್ತಿಗಳಿಗೆ ಸಹಾಯ ಮಾಡುವ ದೃಷ್ಟಿಯಿಂದ ಎಲ್ಲಿಯಾದರೂ ಸಂದರ್ಭ ಬರಬಹುದು. ಆ ದೃಷ್ಟಿಯಿಂದ ಪರಿಷ್ಕರಣೆಯನ್ನು ಮಾಡುವಾಗ ಕಡಿಮೆ ಮೌಲ್ಯ ಎಂದು ಮಾಡತಕ್ಕದ್ದು ಅಲ್ಲ ಎಂದು ಕ್ಲಾಸ್ ಸೇರಿಸಿಕೊಳ್ಳತಕ್ಕದ್ದು ಒಳ್ಳೆಯದು. ನಿಯಮಾವಳಿಯನ್ನು ರೂಪಿಸಿಕೊಳ್ಳುವಾಗ ಈ ರೀತಿ ಮಾಡುವುದು ಒಳ್ಳೆಯದೆಂದು ಹೇಳಲಿಕ್ಕೆ ಬಯಸುತ್ತೇನೆ. ಇನ್ನು (ಡಿ)ನಲ್ಲಿ ಉತ್ತಮರೀತಿಯಲ್ಲಿ ಅರಣ್ಯದ ನಿರ್ವಹಣೆಯ ಮತ್ತು ಮರಗಳನ್ನು ಕೀಳುವ ದೃಷ್ಟಿಯಿಂದ, ಎನ್ನುವುದರಲ್ಲಿ ಉತ್ತಮ ಮರಗಳನ್ನು ಕೂಡ ಕೀಳುವ ದೃಷ್ಟಿಯಿಂದ ಎನ್ನುವ ವರ್ಡಿಂಗ್ ಬರುತ್ತದೆ. ಉತ್ತಮ ಮರಗಳನ್ನು ಕೀಳಬಾರದು. ವಯಸ್ಸಾದರೆ ಕೀಳಬಹುದೇ ಹೊರತು ಇಲ್ಲದೇ ಇದ್ದರೆ ಇಲ್ಲ. ಈಗ ಇಲ್ಲಿ ಏನಾಗುತ್ತದೆ ಅಂದರೆ ಉತ್ತಮ ರೀತಿಯ ಮರಗಳನ್ನು ಕೀಳಲಿಕ್ಕೆ ಒಂದು ವಿಧೇಯಕ ಮಾಡಲಾಗಿದೆ ಎಂಬ ಒಂದು ಅಭಿಪ್ರಾಯ ಬರುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೋಗಿ, ಮತ್ತಿ ಮೊದಲಾದ ಹಾರ್ಡ್ ಮರಗಳನ್ನು ಕಡಿದು ಅದರಲ್ಲಿ ಸಾಫ್ಟ್‌ವುಡ್ ಬೆಳೆಸುವ ಪ್ರವೃತ್ತಿ ಅರಣ್ಯ ಇಲಾಖೆಯಲ್ಲಿ ಪ್ರಾರಂಭವಾಗಿದೆ ಹಾಗೂ ಜನರಲ್ಲಿಯೂ ಕೂಡ ಪ್ರಾರಂಭವಾಗಿದೆ. ಒಟ್ಟಿನಲ್ಲಿ ಉತ್ತಮ ರೀತಿಯ ಮರಗಳನ್ನು ತೆಗೆಯುವಂಥ ಕಾಯಿದೆ ಆಗಬಾರದು.

ಇನ್ನು (ಇ)ನಲ್ಲಿ ಪರಿಸ್ಥಿತಿ ಸಮತೋಲನವನ್ನು ರಕ್ಷಿಸುವಂಥ ವಿಚಾರವನ್ನು ಹೇಳಿದ್ದೀರಿ. ನಾನು ತಮಗೆ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಅರಣ್ಯ ಕಾಯಿದೆಯ ಪ್ರಕಾರ ಹಾವುಗಳನ್ನು ಸಾಕಲಿಕ್ಕೆ ಯಾವುದೇ ಪರವಾನಗಿಯನ್ನು ಕೊಡುವಂಥಾದ್ದು ಎಂ.ಎಸ್ಸಿ., ಪಿ.ಹೆಚ್.ಡಿ., ಮಾಡುವವರಿಗೆ ಮಾತ್ರ ಎಂದು ನಾನು ಕೇಳಿದ್ದೇನೆ. ನಮ್ಮ ದಕ್ಷಿಣ ಕನ್ನಡದಲ್ಲಿ ಹವ್ಯಾಸಿಯೊಬ್ಬ ಆತನ ಹೆಸರು ರವೀಂದ್ರನಾಥ್ ಐತಾಳ್ ಎಂದು. ಅವರು ಒಂದು ಕೋ ಆಪರೇಟೀವ್ ಸಂಸ್ಥೆಯಲ್ಲಿ ಗುಮಾಸ್ತರಾಗಿದ್ದಾರೆ. ಅವರು ತನ್ನ ಮನೆಯಲ್ಲಿ ಒಂದು ಚಿಕ್ಕ ರೂಮಿನಲ್ಲಿ ಹವ್ಯಾಸಕ್ಕಾಗಿ ಹಾವುಗಳನ್ನು ಸಾಕಿ ಅವುಗಳನ್ನು ಮರಿ ಮಾಡಿ ಹಾವಿನ ಸಂತತಿಯನ್ನು ಅಭಿವೃದ್ಧಿ ಪಡಿಸುವ ಕ್ರಮ ಸಾಧ್ಯವೇ ಎಂಬುದನ್ನು ಅಭ್ಯಾಸ ಮಾಡುತ್ತಿದ್ದ ಅವರು ಕಾಡಿಗೆ ಹೋಗಿ ಆ ಹಾವುಗಳನ್ನು ಹಿಡಿದು ತಂದಿರಲಿಲ್ಲ. ಇನ್ನೊಬ್ಬರ ಮನೆಯಲ್ಲಿ ತೊಂದರೆ ಕೊಡುತ್ತಿದ್ದ ಹಾವುಗಳನ್ನು ಹಿಡಿದು ಗಂಡು ಹೆಣ್ಣುಗಳನ್ನು ಒಂದು ಕಡೆ ಬಿಟ್ಟು ಅವುಗಳಿಂದ ಮರಿ ಮಾಡಿಸಿ, ಆ ಮರಿಗಳನ್ನು ಸಾಕಿ ತಳಿಯನ್ನು ಅಭಿವೃದ್ಧಿ ಮಾಡಿ ಕಾಡಿಗೆ ಬಿಟ್ಟು ಬರುತ್ತಿದ್ದರು. ಎಂ.ಎಸ್ಸಿ, ಪಿ.ಹೆಚ್.ಡಿ. ಮಾಡು

ವವರಿಗೆ ಇದರಿಂದ ಉಪಯೋಗವಾಗುತ್ತಿತ್ತು. ಆದರೆ ಇವರಿಂದ ಉಪಯೋಗವನ್ನು ಪಡೆಯುತ್ತಿದ್ದವರು ಅರಣ್ಯ ಇಲಾಖೆಗೆ ಹೋಗಿ ದೂರು ಕೊಟ್ಟಮೇಲೆ ಈ ಐತಾಳರು ಇಡೀ ಹಾವಿನ ಸಂತತಿಯನ್ನೇ ಕಾಡಿಗೆ ತೆಗೆದುಕೊಂಡು ಹೋಗಿ ಬಿಡಬೇಕಾದ ಪರಿಸ್ಥಿತಿ ಬಂತು. ನಾನು ಇತ್ತೀಚಿಗೆ ಅವರನ್ನು ಸಂಪರ್ಕಿಸಿದಾಗ, ಅವರು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಅವರಲ್ಲಿ ರಿಕ್ವೆಸ್ಟ್ ಮಾಡಿಕೊಂಡರು. ಆದರೆ ಅರಣ್ಯ ಇಲಾಖೆಯಲ್ಲಿ ಇದಕ್ಕೆ ಸರಿಯಾದ ಕಾಯಿದೆ ಇಲ್ಲ ಎಂದು ತಿಳಿದುಬಂದಾಗ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಬರೆದಮೇಲೆ ಅವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅದನ್ನು ಕಳುಹಿಸಿದ್ದಾರೆ.

ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ಹೇಳುವುದಾದರೆ, ಇವತ್ತು ದೊಂಬರಾಟವನ್ನು ಮಾಡಲಿಕ್ಕೆ ಹಾವುಗಳನ್ನು ಹಿಡಿದು, ಹೊಟ್ಟೆ ಪಾಡಿಗಾಗಿ ಬೀದಿ ಬೀದಿಗಳಲ್ಲಿ ಈ ಹಾವುಗಳಿಗೆ ಹಿಂಸೆ ಮಾಡುವವರಿದ್ದಾರೆ. ಅದಕ್ಕೆಲ್ಲಾ ಪ್ರತಿಬಂಧಕ ಇಲ್ಲ ಯಾರಾದರೂ ಹವ್ಯಾಸಿಗಳು ಮುಂದೆ ಬಂದು ತಾವು ಈ ಹಾವಿನ ಸಂತತಿಯನ್ನು, ಹಾವಿನ ತಳಿಯನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದರೆ ನೀವು ಅವರಿಗೆ ಪರವಾನಿಗಿ ಕೊಡಬಹುದು. ಹಣ ಮಾಡುವಂಥವರು ಕಂಡುಬಂದರೆ ಅವರ ಲೈಸೆನ್ಸನ್ನು ಕ್ಯಾನ್ಸಲ್ ಮಾಡಿ.

ಇನ್ನು ೪ನೇ ಅಂಶದಲ್ಲಿ ಖರೀದಿ ಮಾಡುವ ಮತ್ತು ಸರಬರಾಜು ಮಾಡುವ ಅರಣ್ಯ ಉತ್ಪನ್ನದ ಬೆಲೆಯು ಮಾರುಕಟ್ಟೆಯ ಮೌಲ್ಯಕ್ಕೆ ಮೀರಬಾರದೆಂದು ಒಂದು ಕಂಡೀಷನ್ನು ಹಾಕಿದ್ದೀರಿ. ಇದರ ಅರ್ಥ ಏನು ಎಂದು ನನಗೆ ಆಗಲಿಲ್ಲ. ಮಾರ್ಕೆಟ್ ಮೌಲ್ಯಕ್ಕೆ ಮೀರಿ ಮಾರಾಟ ಮಾಡಿದರೆ ಅದರಿಂದ ಸರ್ಕಾರಕ್ಕೇ ಲಾಭ ಬರುತ್ತದೆ. ಆದ್ದರಿಂದ ಮಾರ್ಕೆಟ್ ಮೌಲ್ಯಕ್ಕೆ ಸೀಮಿತ ಮಾಡತಕ್ಕ ಕಂಡೀಷನ್ ಸರಿಯಲ್ಲ. ಇದರ ಅರ್ಥ ನನಗೆ ಆಗುತ್ತಿಲ್ಲ. ಒಟ್ಟಿನಲ್ಲಿ ಅರಣ್ಯ ನಾಶವನ್ನು ತಡೆಗಟ್ಟುವಂಥ, ಮತ್ತು ಅರಣ್ಯವನ್ನು ಅಭಿವೃದ್ಧಿ ಪಡಿಸತಕ್ಕ ಯೋಜನೆಗಳ ಪರಿಷ್ಕರಣೆ ಮಾಡುವುದು, ರಕ್ಷಣೆ ಮಾಡುವುದು ಎನ್ನತಕ್ಕ ವಿಚಾರವನ್ನು ತಾವು ಇಲ್ಲಿ ತಂದಿರತಕ್ಕದ್ದು ಸಫಲವಾಗಲಿ ಎಂದು ಹೇಳಿ ಈ ವಿಧೇಯಕವನ್ನು ಸ್ವಾಗತಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯನ್ನು ಮಾನ್ಯ ಅರಣ್ಯ ಮಂತ್ರಿಗಳು ತಂದಿರುವುದಕ್ಕೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಆದರೆ ಯಾವ ತಿದ್ದುಪಡಿಯನ್ನಾಗಲಿ, ಯಾವ ಕಾನೂನನ್ನಾಗಲಿ ತಂದರೂ ಕೂಡ ಅದರಿಂದ ಪ್ರಯೋಜನ ಆಗುವುದಾದರೆ, ಅದರಿಂದ ಈ ದೇಶದ ಜನರಿಗೆ ಉಪಯೋಗ ಆಗುವುದಾದರೆ ಇಲ್ಲಿ ತರುವುದು ಸರಿಯೆಂದು ನನ್ನ ಭಾವನೆ.

ಈಗಿರತಕ್ಕ ಕಾನೂನಿನಲ್ಲಿ, ತಿದ್ದುಪಡಿಯಲ್ಲಿ ಈ ರಾಜ್ಯಕ್ಕೆ, ಈ ಪರಿಸರಕ್ಕೆ ಏನೇನೂ ಉಪಯೋಗವಾಗುತ್ತಿಲ್ಲ. ನಾನು ಬಹಳ ನೊಂದು ಒಂದು ಮಾತನ್ನು ಹೇಳುತ್ತಿದ್ದೇನೆ. ಕಾಡಿನ ಪ್ರಾಣಿಗಳು ಸತ್ತು ಹೋಗಿದ್ದರೆ, ಕಾಡು ನಾಶವಾಗಿದ್ದರೆ, ಅದಕ್ಕೆ ಮುಖ್ಯ ಕಾರಣ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಅರಣ್ಯ ಇಲಾಖೆಯ ನೌಕರರು ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಏಕೆಂದರೆ, ೪ ವರ್ಷಗಳ ಹಿಂದೆ ನನ್ನ ಊರಿನಲ್ಲಿ ಒಬ್ಬ ರೇಂಜ್ ಆಫೀಸರ್ ಇದ್ದ. ಆತ ಕಾಡು ಕೋಣವನ್ನು ಶಿಕಾರಿ ಮಾಡಿ ತನ್ನ ಸ್ವಂತ ಊರಾದ ಗುಲ್ಬರ್ಗಾಕ್ಕೆ ಡಬ್ಬಗಳಲ್ಲಿ ತುಂಬಿ ಕಳುಹಿಸುತ್ತಿದ್ದ. ಈ ರೇಂಜ್ ಅಧಿಕಾರಿ ಈ ರೀತಿ ಮಾಡುತ್ತಿದ್ದಾನೆಂಬುದನ್ನು ಸಾರ್ವಜನಿಕರು ಪತ್ತೆ ಹಚ್ಚಿ ಸರ್ಕಾರಕ್ಕೆ ಮಾಹಿತಿಯನ್ನು ಕೊಟ್ಟಿದ್ದಕ್ಕೆ ನಿಮ್ಮ ಅಧಿಕಾರಿಗಳು ಮಾಡಿದ್ದಾದರೂ ಏನು ? ಯಾರು ಮಾಹಿತಿಯನ್ನು ಕೊಟ್ಟರೋ ಅವರ ಮೇಲೆ ಸುಳ್ಳು ಕೇಸನ್ನು ಹಾಕಿ ಅವರನ್ನೇ ಜೈಲಿಗೆ ಕಳುಹಿಸಿದರು. ಇದೇರೀತಿ ಕಳೆದ ವರ್ಷ ನನ್ನ ಕ್ಷೇತ್ರದಲ್ಲಿ ಅಯನೂರು ಎಂಬಲ್ಲಿ ಒಂದು ದೊಡ್ಡ ಪ್ಲಾಂಟೇಷನ್ ಇದೆ. ಅಲ್ಲಿ ಹಸಿಯಾದ ಸಾಗುವಾನಿ ಮರಗಳನ್ನು ಕಡಿದು ಬೆಂಗಳೂರಿಗೆ ಕಳುಹಿಸುತ್ತಿದ್ದರು. ನನ್ನ ಕ್ಷೇತ್ರದ ಮತದಾರರು ಅದನ್ನು ಹಿಡಿದುಕೊಂಡಿದ್ದಕ್ಕೆ ನಿಮ್ಮ ಸರ್ಕಾರ ಏನು ಮಾಡಿತು ಎಂದರೆ ಆತನ ಮೇಲೆ ಕ್ರಮ ತೆಗೆದುಕೊಳ್ಳದೆ ಅವನಿಗೆ ಪ್ರಮೋಷನ್ ಕೊಟ್ಟಿದ್ದಾರೆ.

ಸ್ವಾಮಿ, ಇನ್ನೊಂದು ವಿಚಾರವನ್ನು ಹೇಳುವುದಾದರೆ ವರಾಹಿ ಮುಳುಗಡೆ ಪ್ರದೇಶದಲ್ಲಿ ಮರಗಳ ನಾಟಾಗಳನ್ನು ಸ್ಟಾಕ್ ಯಾರ್ಡ್‌ನಲ್ಲಿ ಸ್ಟಾಕ್ ಮಾಡಿದರು. ಸುಮಾರು ೩ ಮೈಲಿ ಉದ್ದ, ೪ ಮೈಲಿ ಅಗಲದವರೆಗೂ ಈ ನಾಟಾಗಳನ್ನು ಸ್ಟಾಕ್ ಮಾಡಿದರು. ಹಾಡು ಹಗಲಿನಲ್ಲೇ ಅಧಿಕಾರಿ

ಗಳು ತಮಗೆ ಬೇಕಾದವರಿಗೆ, ತಮ್ಮ ಸಂಬಂಧೀಕರಿಗೆ, ದಂಡ್ಡನ್ನು ಕೊಟ್ಟವರಿಗೆ ಲಾರಿಗಳಲ್ಲಿ ಈ ನಾಟಾಗಳನ್ನು ತುಂಬಿ ಕಳುಹಿಸಿಕೊಡುತ್ತಿದ್ದರು.

ಅದನ್ನೂ ಕೂಡ ಸಾರ್ವಜನಿಕರು ಹಿಡಿದುಕೊಟ್ಟರು. ಅದರ ಬಗ್ಗೆ ಮೂರು ವರ್ಷಗಳ ಹಿಂದೆ ೩೩೪ರ ಪ್ರಕಾರ ಇಂಥ ಲಾರಿ, ಇಂಥ ಟ್ರಾನ್ಸ್‌ಪೋರ್ಟ್, ಇಂಥವರಿಗೆ ಹೋಗಿದೆ, ಇಂಥವರದು ಓನರ್‌ಶಿಪ್ ಇರುತ್ತದೆಂದು ಪೂರ್ಣ ವಿವರಗಳನ್ನು ಕೊಟ್ಟೆ, ಅದನ್ನು ಕೂಡ ಏನು ಮಾಡಲಿಲ್ಲ. ಹೀಗೆ ಮಾಡುವುದಾದರೆ ಕಾನೂನು ಮಾಡಿ ಏನು ಸುಖ? ಈಗಿರತಕ್ಕಂಥ ಕಾನೂನಿನ ಪ್ರಕಾರ ಜೈಲಿಗೆ ಹಾಕಬಹುದಾಗಿತ್ತು ಶಿಕ್ಷೆಯನ್ನು ಕೊಡಬಹುದಾಗಿತ್ತು. ಆ ನೌಕರನನ್ನು ಕೆಲಸದಿಂದ ತೆಗೆದುಹಾಕಬಹುದಾಗಿತ್ತು, ಅಂಥ ಯಾವ ಒಂದು ಕ್ರಮವನ್ನು ನೀವು ತೆಗೆದುಕೊಳ್ಳಲಿಲ್ಲ.

ಅಧ್ಯಕ್ಷರು.— ಮಾನ್ಯ ಬಾಗಲಕೋಟೆಯವರೇ, ಅರಣ್ಯ ಖಾತೆಯಲ್ಲಿ ಅರಣ್ಯ ರೋದನ ಆಗಬಾರದು.

ಶ್ರೀ ಬಿ ಸ್ವಾಮಿರಾವ್.— ಇದರ ಬಗ್ಗೆ ಆಶೆಯನ್ನೇ ಇಟ್ಟುಕೊಳ್ಳುವಂತಿಲ್ಲ. ಹೊಸನಗರ ತಾಲ್ಲೂಕಿನಲ್ಲಿ ೧೦ ಸಾವಿರ ಮರಗಳಿವೆ. ವೆಸ್ಟರ್ನ್‌ಘಾಟ್‌ನಲ್ಲಿ ಇರತಕ್ಕಂಥ ಮರಗಳ ಸುತ್ತಳತೆ ಸುಮಾರು ೨೦-೨೫ ಅಡಿಗಳು, ಎತ್ತರ ಸುಮಾರು ೧೦೦-೧೫೦ ಅಡಿಗಳು. ಇಷ್ಟೊಂದು ಎತ್ತರವಾಗಿರತಕ್ಕಂಥ ಮರಗಳನ್ನು ಸಾಮಾನ್ಯವಾಗಿ ಪ್ರತಿಯೊಬ್ಬರೂ ನೋಡಿರುವುದಿಲ್ಲವೆಂದು ಭಾವಿಸುತ್ತೇನೆ. ಇಂಥ ಮರಗಳ ಸಿಪ್ಪೆಯನ್ನು ಕಳ್ಳಸಾಗಾಣಿಕೆದಾರರು ಮತ್ತು ಆಫೀಸರುಗಳು ಸೇರಿ ಕಿತ್ತು ತೆಗೆದಿದ್ದಾರೆ. ಈ ಮರಗಳ ಚಕ್ಕೆಯನ್ನು ತೆಗೆದಿದ್ದಾರೆ. ಬಹುಶಃ ಚಕ್ಕೆ ಅಂದರೆ ಅದರ ತೊಗಟೆಯನ್ನು ಯಾವರೀತಿ ಸುಲಿದಿದ್ದಾರೆಂದರೆ, ಪ್ರಾಣಿಗಳ ಚರ್ಮವನ್ನು ಸುಲಿಯುವ ರೀತಿಯಲ್ಲಿ ಸುಲಿದಿದ್ದಾರೆ. ಪ್ರಾಣಿಗಳನ್ನು ಸುಲಿದಾಗ ಕೆಂಪುಬಣ್ಣ ಬರುತ್ತದೆ, ಆ ರೀತಿಯಲ್ಲಿ ೧೦ ಸಾವಿರ ಮರಗಳನ್ನು ಸುಲಿದು ತೆಗೆದಿದ್ದಾರೆ. ಈ ರೀತಿ ಸುಲಿದ ಹತ್ತುಸಾವಿರ ಮರಗಳು ನಿಂತಿರುವುದನ್ನು ನೋಡಿ ನಾನು ಒಂದು ಪತ್ರವನ್ನು ಬರೆದು ಕಳುಹಿಸಿಕೊಟ್ಟೆ. ಇದನ್ನು ಪರಿಗಣನೆಗೆ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಯನ್ನು ಕೆಲಸದಿಂದ ತೆಗೆಯಬೇಕೆಂದು ನಾನು ಪತ್ರವನ್ನು ಬರೆದಿದ್ದೆ ಇಂಥವರನ್ನು ಜೈಲಿನಲ್ಲಿಯೇ ಇಡಬೇಕು, ಹೊರಗಡೆ ಇಟ್ಟರೆ ಇನ್ನು ಏನಾದರೂ ಅನಾಹುತ ಮಾಡುತ್ತಾರೆಂದು ಹೇಳಿ ಲೆಟರನ್ನು ಕಳುಹಿಸಿಕೊಟ್ಟಿದ್ದೆ.

ಒಂದು ಅನ್ಯಾಯವಾಗಿದೆ, ಏನೆಂದರೆ ರೇಸ್ ಆಫೀಸರ್‌ಗೆ ಕೊಟ್ಟಿರತಕ್ಕಂಥ ಅಧಿಕಾರ ಅರಣ್ಯವನ್ನು ಕಾಯಬೇಕೆಂದು, ಫಾರೆಸ್ಟನ್ನು ಕಾಯು ಬೇಕೆಂದು. ಆದರೆ ಆಜ್ಞೆಯನ್ನು ಪಾಲನೆ ಮಾಡಿರ ತಕ್ಕಂಥ ರೇಂಜ್ ಆಫೀಸರನ್ನು ಸಸ್‌ಪೆಂಡ್ ಮಾಡಿರುತ್ತಾರೆ. ಸಸ್‌ಪೆಂಡ್ ಮಾಡಿರುವುದರಿಂದ ಆತನು ಹೊಟ್ಟೆಗಿಲ್ಲದೆ ಭಿಕ್ಷೆ ಬೇಡುತ್ತಿದ್ದಾನೆ. ಯಾವನು ನ್ಯಾಯವಾಗಿ ಡ್ಯೂಟಿ ಮಾಡಿರುತ್ತಾನೆ ಅವನನ್ನು ಸಸ್‌ಪೆಂಡ್ ಮಾಡಿರುವುದರಿಂದ ಉದ್ಯೋಗವಿಲ್ಲದೆ ಬಿಕ್ಷೆ ಬೇಡುತ್ತಿರುತ್ತಾನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ವಿಷಯವಾಗಿರುತ್ತದೆ. ಆದ್ದರಿಂದ ಬಹಳ ಕಾಳಜಿ ತೆಗೆದುಕೊಂಡರೆ ಒಳ್ಳೆಯದೆಂದು ಹೇಳುತ್ತೇನೆ.

ಅಧ್ಯಕ್ಷರು.— ಇದು ಈವತ್ತೇ ಮುಗಿಯಬೇಕು. ಪ್ರತಿಯೊಬ್ಬರಿಗೂ ೫-೫ ನಿಮಿಷ ಅವಕಾಶವನ್ನು ಮಾಡಿಕೊಟ್ಟಿರುತ್ತೇನೆ. ೫-೫ ನಿಮಿಷಗಳು ಮಾತ್ರ ಮಾತನಾಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಎರಡು ಕಡೆಯಿಂದ ಇನ್ನೂ ೩-೪ ಜನರು ಮಾತನಾಡುವವರಿದ್ದಾರೆ. ಏನಾಗುತ್ತದೆಂದರೆ, ನಾವು ಇನ್ನು ಎಷ್ಟು ಗಂಟೆಗಳವರೆಗೆ ಕುಳಿತುಕೊಳ್ಳಬೇಕು ಅದನ್ನಾದರೂ ಹೇಳಿ.

ಅಧ್ಯಕ್ಷರು.— ಮಾನ್ಯ ಬಸವಲಿಂಗಪ್ಪನವರು ಮಾತನಾಡುವವರಿದ್ದಾರೆ...

ಶ್ರೀ ಬಿ. ಸ್ವಾಮಿರಾವ್.— ಇದೇ ಸಂದರ್ಭದಲ್ಲಿ ಗೋಮಾವು ಮರದ ಚಕ್ಕೆಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಒಯ್ಯುವವರ ಬಗ್ಗೆ ೩೩೪ರ ಪ್ರಕಾರ ನೋಟೀಸ್ ಕಳುಹಿಸಿದ್ದೆ. ಕೇಸ್ ಹಾಕಿ ವಿಚಾರಣೆಯನ್ನು ನಡೆಸಬೇಕೆಂದು ಕೇಳಿಕೊಂಡಿದ್ದೆ. ಕೇಸ್ ಹಾಕಿರುತ್ತಾರೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಇನ್ನೂ ಕೂಡ ಏನು ಮಾಡಿದ್ದಾರೆನ್ನುವುದು ಗೊತ್ತಿಲ್ಲ. ಹೊಸನಗರದಿಂದ ಸಾಗುವಾನಿ ನಾಟಾವನ್ನು ಅಧಿಕಾರಿಗಳು ಸಾಗಿಸುತ್ತಿದ್ದುದನ್ನು ತಮಗೆ ಬರೆದಿದ್ದೆ. ಅದೂ ಕೂಡ ಡಿ.ಎಫ್.ಓ.,

ರವರಿಗೆ ಜವಾಬ್ದಾರಿ ಇರತಕ್ಕಂಥ, ದೊಡ್ಡ ಹುದ್ದೆಯಲ್ಲಿರತಕ್ಕಂಥವರಿಗೆ ಬರೆದು ಹೇಳಿದ್ದೆ. ಅದಕ್ಕೂ ಕೂಡ ಉತ್ತರ ಬರಲಿಲ್ಲ. ಇವತ್ತು ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಬಂಗಲೆಗಳನ್ನು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವವರು ಕಟ್ಟಿಕೊಂಡಿರುತ್ತಾರೆ ಎಂಬ ವಿಷಯವನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಯಾವ ಶಾಸಕರೂ ಮಂತ್ರಿಗಳೂ ಕೂಡ ಅಷ್ಟು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಂಡಿಲ್ಲ. ನನ್ನ ಸ್ನೇಹಿತರೊಬ್ಬರು ವೈದ್ಯರು ಇದ್ದಾರೆ. ಅವರ ಜೊತೆಯಲ್ಲಿ ಹೋದಾಗ, ಇದು ನಿಮ್ಮಲ್ಲಿದ್ದ ಡಿ.ಎಫ್.ಓ. ಅವರ ಮನೆ, ಇದು ರೇಂಜರ್ ಮನೆ ಎಂದು ತೋರಿಸಿದರು. ಆಮೇಲೆ ಹಾಗೇ ಮುಂದೆ ಹೋಗಿ ಇದು ಅವರ ಎರಡನೆಯ ಮನೆ ಎಂದು ತೋರಿಸಿದರು. ಮೂರನೇ ಮನೆಯನ್ನು ನೋಡುವುದಕ್ಕೆ ಹೋಗಲಿಲ್ಲ. ಮಾನ್ಯ ಬಾಗಲಕೋಟೆಯವರು ದೊಡ್ಡ ಸಾಹಸ ಮಾಡಿ ಯಾವ ಯಾವ ಅರಣ್ಯ ಅಧಿಕಾರಿ ಬೆಂಗಳೂರಿನಲ್ಲಿ ಮನೆ ಕಟ್ಟಿದ್ದಾನೆ, ಯಾವ ಯಾವ ಸಂಬಂಧಿಕರ ಹೆಸರಿನಲ್ಲಿ ಕಟ್ಟಿದ್ದಾನೆ ಎಂಬುದನ್ನು ಪತ್ತೆ ಮಾಡಬೇಕು. ಅರಣ್ಯ ಇಲಾಖೆಯಲ್ಲಿ ಆಗಿರತಕ್ಕ ಲೋಪ ದೋಷಗಳು, ದೇಶದ್ರೋಹ ಬೇರೆ ಯಾವ ಇಲಾಖೆಯಲ್ಲೂ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ವರಾಹಿಯಲ್ಲಿ ಮುಳುಗಡೆ ಆದಂತಹ ಸಂದರ್ಭದಲ್ಲಿ ಅದನ್ನು ತೆಗೆಯುವುದಕ್ಕೆ ಅರಣ್ಯ ಇಲಾಖೆಯವರು ಹೋದರು. ಮುಳುಗಡೆ ಜಾಗ ಹತ್ತು ಎಕರೆ ಎಂದು ಲೆಕ್ಕದಲ್ಲಿ ತೋರಿಸಿದರೆ, ಮುಳುಗಡೆ ಆಗದ ನೂರಾರು ಎಕರೆಯಲ್ಲಿ ನಾಟಾವನ್ನು ಕತ್ತರಿಸಿ ಸಾಗಿಸಿಬಿಟ್ಟಿದ್ದಾರೆ. ನಿನ್ನೆ ಊರಿಗೆ ಹೋದಾಗ ಜನ ಹೇಳಿದರು, ಕಳ್ಳ ನಾಟಾವನ್ನು ಸಾಗಿಸುತ್ತಿದ್ದಾರೆ ಎಂದು. ವರಾಹಿ ಮತ್ತು ಶರಾವತಿ ಯೋಜನೆಯಿಂದ ಮುಳುಗಡೆಯಾದ ರೈತರು ತಮ್ಮ ಖಾತೆಯಲ್ಲಿದ್ದ ಜಮೀನಿನಲ್ಲಿ ಏನು ಹಣ್ಣುಗಳನ್ನು ಬೆಳೆದಿದ್ದರು, ಏನು ಸಾಗವಾನಿ ಮುಂತಾದ ಮರಗಳನ್ನು ಬೆಳೆಸಿದ್ದರು ಅವುಗಳನ್ನು ಅಳತೆ ಮಾಡದೆ ಹಾಡು ಹಗಲೇ ಕಡಿದುಕೊಂಡು ಹೋದರು. ಅವರು ಅರ್ಜಿ ಕೊಟ್ಟರೂ ಅದಕ್ಕೆ ಬೆಲೆ ಕೊಡಲಿಲ್ಲ, ಅಳತೆ ಮಾಡಲಿಲ್ಲ, ಕಾನೂನು ಅಳವಡಿಸಲಿಲ್ಲ. ಹೀಗಾಗಿ ಮುಳುಗಡೆ ರೈತರಿಗೆ ಲುಕ್ಸಾನಾಯಿತು. ಜಮೀನು, ಮನೆ, ಮುಳುಗಡೆ ಆಯಿತು. ಯಾವುದೇ ಪರಿಹಾರ ಸಿಗಲಿಲ್ಲ. ಈ ರೀತಿ ಅಧಿಕಾರಿಗಳು ನಾಟಾವನ್ನು, ಕಟ್ಟಿಗೆಯನ್ನು ದುರುಪಯೋಗ ಮಾಡಿದ್ದಾರೆ. ಕಾಡಿನಲ್ಲಿ ಸಿಗತಕ್ಕ ಸಂಪತ್ತುಗಳಾದ ಜೇನು, ಹಣ್ಣು ಹಂಪಲು, ಬೆತ್ತ, ಮೆಣಸು ಇತ್ಯಾದಿಗಳು ಯಾವ ಲೆಕ್ಕಕ್ಕೂ ಸಿಗುವುದಿಲ್ಲ. ಅವೆಲ್ಲವನ್ನೂ ಅಲ್ಲಿರತಕ್ಕ ಅಧಿಕಾರಿಗಳೇ ಉಪಯೋಗಿಸುತ್ತಿದ್ದಾರೆ, ಮೊನ್ನೆ ೬೬ ಜನ ಮಹನೀಯರು ೫೭ ಲಕ್ಷ ರೂಪಾಯಿಗಳನ್ನು ನುಂಗಿದ್ದಾರೆ ಎಂಬ ವಿಷಯ ಬಂತು. ಇದರಲ್ಲಿ ವನಪಾಲಕರು ಎಂದು ೩೦—೪೦ ಜನರ ಹೆಸರು ಇದೆ. ಇದನ್ನು ನೋಡಿ ನನಗೆ ಬಹಳ ಸಂಕಟವಾಯಿತು. ದೊಡ್ಡ ಸಾಹೇಬರು ಹೇಳಿದ್ದನ್ನು ಸಣ್ಣ ನೌಕರರು ಮಾಡಿದ್ದಾರೆ. ಡಿ.ಎಫ್.ಓ. ಕನ್ಸರ್ವೇಟರ್ ಏನಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಜೈಲಿಗೆ ಕಳುಹಿಸುವುದು ಒಳ್ಳೆಯದು. ಅದು ಬಿಟ್ಟು ಬೇರೆ ಯಾವ ಶಿಕ್ಷೆ ಕೊಟ್ಟರೂ ಆಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ಶೆಟ್ಟಿಹಳ್ಳಿ ಎಂದು ಇದೆ. ಅಲ್ಲಿ ಶರಾವತಿಯಲ್ಲಿ ಮುಳುಗಡೆಯಾದ ರೈತರು ನೆಲಸಿದ್ದಾರೆ. ಅವರಿಗೆ ರೀಹ್ಯಾಬಿಲಿಟೇಟ್ ಕಮಿಟಿಯವರು ಜಮೀನು, ರಸ್ತೆ ಎಲ್ಲಾ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಆದರೆ ಅವರಿಗೆ ವಿದ್ಯುಚ್ಛಕ್ತಿ ಒದಗಿಸಿರಲಿಲ್ಲ. ನಾನು ಶಾಸಕನಾದಮೇಲೆ ಸಂಬಂಧಪಟ್ಟ ಅಧಿಕಾರಿಗಳನ್ನು ಹಿಡಿದು ವಿದ್ಯುಚ್ಛಕ್ತಿ ಮಂಜೂರು ಮಾಡಿಸಿದ್ದೇನೆ. ೧೦ ಕಿಲೋಮೀಟರ್ ಇರುವುದಕ್ಕೆ ೬-೭ ಕಿಲೋಮೀಟರ್ ವಿದ್ಯುಚ್ಛಕ್ತಿ ಕಂಬ ನಿಲ್ಲಿಸಿ ತಂತಿ ಎಳೆದಿದ್ದಾರೆ. ಕರೆಂಟ್ ಬರುತ್ತದೆಂದು ಕೇಸಿಂಗ್ ಪೈಪ್ ಹಾಕಿದ್ದಾರೆ. ಆದರೆ ಅರಣ್ಯ ಇಲಾಖೆಯವರು ಕಂಬ ಮುಚ್ಚುವುದಕ್ಕೆ ಬಿಡುತ್ತಿಲ್ಲ. ಇದನ್ನು ಅರಣ್ಯ ಸಚಿವರು ನೋಡಬೇಕು. ಸುಮಾರು ಒಂದು ವರ್ಷದಿಂದ ಅದು ಹಾಗೇ ಇದೆ. ಅದೇ ಶೆಟ್ಟಿಹಳ್ಳಿಯಲ್ಲಿ ಒಂದು ಟಿ.ಬಿ. ಇದೆ. ಅಲ್ಲಿ ಅವರಿಗೆ ಕರೆಂಟ್ ಬೇಕಾಗಿದೆ. ಆ ಬಗ್ಗೆ ನಾನು ಮತ್ತು ವಿದ್ಯುಚ್ಛಕ್ತಿ ಇಲಾಖೆಯವರು ಹೇಳಿದ್ದೇವೆ. ಒಂದು ಮರ ಕಡಿಯದೆ ತೆಗೆದುಕೊಂಡು ಹೋಗುತ್ತೇವೆಂದರೂ ಇದುವರೆಗೆ ಪರವಾನಗಿ ಕೊಟ್ಟಿಲ್ಲ. ಯಾವ ಕೆಲಸ ಬೇಕೋ ಅದನ್ನು ಮಾಡುವುದಿಲ್ಲ, ಯಾವುದು ಬೇಡವೋ ಅದನ್ನು ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ, ಜಿಲ್ಲೆಯಲ್ಲಿ ಬಹಳಷ್ಟು ಜನ ಮುಳುಗಡೆ ರೈತರು ಭೂಮಿ ಇಲ್ಲದವರು, ಸಾಗುವಳಿ ಮಾಡಿಕೊಂಡಿರತಕ್ಕವರು ಅಂದರೆ ೧೯೭೭-೭೮ಕ್ಕಿಂತ ಹಿಂದೆ ಬಗರ್‌ಹುಕುಂ ಮಾಡಿಕೊಂಡ ರೈತರು ಇದ್ದಾರೆ. ಆ ರೈತರಿಗೆ ಕೂಡ ಇವರು ಹಿಂಸೆ ಕೊಡುತ್ತಿದ್ದಾರೆ.

ಅದನ್ನು ಕೂಡ ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾಗಿದೆ,

೫-೦೦ ಪಿ.ಎಂ.

ಅಧ್ಯಕ್ಷರು.—ಸಾಕು ಮುಗಿಸಿರಿ. ಚೆನ್ನಾಗಿ ಹೇಳಿದ್ದೀರಿ.

ಶ್ರೀ ಬಿ. ಸಾಮ್ರಾಜ್ಯರಾವ್.—ಅದರ ಜೊತೆಯಲ್ಲಿ ಇನ್ನೊಂದು ಮಾತನ್ನು ಹೇಳುತ್ತಿದ್ದೇನೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಗಂಧದ ಮರಗಳಿದ್ದವು. ಶಿಕಾರಿಪುರ, ಸೊರಬ ಮತ್ತು ಹೊಸನಗರದಲ್ಲಿ ಹೆಚ್ಚಾಗಿತ್ತು. ಈಗ ಅದು ಮಾಯವಾಗಿದೆ. ಇದಕ್ಕೆ ಕಾರಣ ಕಳ್ಳಸಾಗಣೆದಾರರು. ಆದರೆ ಅದಕ್ಕೆ ಬೆಂಬಲ ನೀಡುತ್ತಿರುವವರು, ಅಶೀರ್ವಾದ ಮಾಡುತ್ತಿರುವವರು ಅರಣ್ಯ ಇಲಾಖೆ ಸಿಬ್ಬಂದಿ ವರ್ಗದವರೇ ಎಂದು ನೇರವಾಗಿ ಹೇಳುತ್ತೇನೆ. ಗಂಧದ ಮರಗಳ ಕಳ್ಳಸಾಗಾಣಿಕೆಗೆ ಫಾರೆಸ್ಟ್ ರೇಂಜರ್‌ಗಳೇ ಕುಮ್ಮಕ್ಕು ಕೊಟ್ಟಿದ್ದಾರೆ. ಹಿಂದುಗಡೆಯಿಂದ ಬೆಂಬಲ ಕೊಟ್ಟಿದ್ದಾರೆ ಎಂಬುದು ಗೊತ್ತಾಗಿದೆ. ಮಾನ್ಯ ಅರಣ್ಯ ಮಂತ್ರಿಗಳು ಕಾನೂನಿಗೆ ಏನೇ ತಿದ್ದುಪಡಿ ತಂದರೂ ಅಧಿಕಾರಿಗಳನ್ನು ಸರಿಮಾಡದಿದ್ದರೆ, ಅಧಿಕಾರಿಗಳನ್ನು ಪಳಗಿಸದಿದ್ದರೆ, ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಅಧಿಕಾರಿಗಳಿಗೆ ಮೂಗುದಾರ ಹಾಕುವ ಅಥವಾ ಪಳಗಿಸುವ ಕೆಲಸವನ್ನು ಮಾನ್ಯ ಮಂತ್ರಿಗಳಾದ ಶ್ರೀ ಬಾಗಲಕೋಟೆ ಅವರು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ತಾವು ಮಾತನಾಡಿ. ೧೦ ನಿಮಿಷದಲ್ಲಿ ಮುಗಿಸಿ.

ಒಬ್ಬ ಮಾನ್ಯ ಸದಸ್ಯರು.—ನಮಗೆಲ್ಲಾ ಐದು ನಿಮಿಷ ಅಂದಿರಿ.

ಅಧ್ಯಕ್ಷರು.—ಅವರಿಗೆ ಸ್ಪೆಷಲ್ ಕೇಸ್.

ಶ್ರೀ ಬಿ. ಬಸವಲಿಂಗಪ್ಪ.—(ಯಲಹಂಕ)

† ಮಾನ್ಯ ಅಧ್ಯಕ್ಷರೇ, ನಾನು ಬಯಲು ಪ್ರದೇಶದ ಒಬ್ಬ ಮನುಷ್ಯ. ಕಾಡನ್ನು ನೋಡಿದಾಗ ನನಗೆ ಆನಂದ. ಆದರೆ ನಾನು ಏತಕ್ಕೆ ಮಾತನಾಡುತ್ತೇನೆ ಎಂಬುದಕ್ಕೆ ಒಂದು ಹಿನ್ನೆಲೆ ಇದೆ. ಶ್ರೀಮಾನ್ ಬಾಗಲಕೋಟೆ ಅವರು ಎಲ್ಲಾ ಸದಸ್ಯರಿಗೂ ಒಂದು ಕಾಗದ ಬರೆದಿದ್ದಾರೆ. ಅದರಲ್ಲಿ ಅವರು ಹಸಿರು ಗಿಡಗಳನ್ನು ಬಣ್ಣಿಸಿದ್ದಾರೆ. ಹಸಿರು ಕಾಡುಗಳನ್ನು ಬಣ್ಣಿಸಿದ್ದಾರೆ. ಅದನ್ನು ಸೃಷ್ಟಿ ಮಾಡುವುದರ ಬಗ್ಗೆ ನಮ್ಮ ಪ್ರಯತ್ನ ಹೇಗಿರಬೇಕು ಎಂಬುದನ್ನು ಬಣ್ಣಿಸಿದ್ದಾರೆ. ನಾನು ಕಾಗದ ಬರೆಯಬೇಕೆಂದಿದ್ದೆ. ಆದರೆ ಈಗ ಸಮಯ ಸಿಕ್ಕಿರುವುದರಿಂದ ಉತ್ತರ ಕೊಡುತ್ತೇನೆ ಫಾರೆಸ್ಟ್ ಇಲಾಖೆ ತಮಗೆ ಹೊಸದು. ಒಬ್ಬನೇ ಒಬ್ಬ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಇದ್ದಾಗ ಕಾಡು ಹೇಗಿತ್ತು, ಈಗ ಹೇಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಒಬ್ಬರಿದ್ದಾಗ ಅರಣ್ಯ ಎಂಬ ಹೆಸರಿಗೆ ತಕ್ಕಂತೆ ದಟ್ಟವಾದ ಕಾಡಿತ್ತು. ಎಲ್ಲಿ ನೋಡಿದರೂ ಹಸಿರು ಇತ್ತು. ಎಲ್ಲೆಲ್ಲೂ ಕಾಡನ್ನು ನೋಡಬಹುದಾಗಿತ್ತು. ಜನರಿಗೆ ಆಗ ಕಾಡು ಕಡಿಯುವುದಕ್ಕೆ ಭಯ ಇತ್ತು. ಕಡಿಯುವ ಧೈರ್ಯ ಇರಲಿಲ್ಲ ಆ ಕಾಲದಲ್ಲಿ. ತಾವು ಬಯಲುಸೀಮೆಯವರು. ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಈಗ ೩೦ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಆದಮೇಲೆ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನೋಡಿ. ನಾನು ಉತ್ತರ ಕನ್ನಡ ಜಿಲ್ಲೆಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿದ್ದೆ. ಎಲ್ಲಿ, ಎಷ್ಟು ದೂರ ನೋಡಿದರೂ ಅಲ್ಲಿ ಬಯಲು ಕಾಣುತ್ತಿದೆ. ಕೂರ್ಗ್‌ನಲ್ಲೂ ಬಯಲು ಮಾಡಲಿಕ್ಕೆ ಹೊರಟಿದ್ದಾರೆ. ಕಾನೂನು ಪ್ರಕಾರ ೩೩ ಪರ್ಸೆಂಟ್ ಕಾಡಿರಬೇಕು. ಈಗ ಎಷ್ಟಕ್ಕೆ ಬಂದಿದೆ ಕರ್ನಾಟಕದಲ್ಲಿ? ಶೇಕಡ ೧೩ಕ್ಕೆ ಬಂದಿದೆ. ಅಂದರೆ, ಅರಣ್ಯಾಧಿಕಾರಿಗಳು ಎಷ್ಟರ ಮಟ್ಟಿಗೆ ಶ್ರಮಪಟ್ಟು ಕಾಡನ್ನು ಹಾಳು ಮಾಡುವುದಕ್ಕೆ ಕೆಲಸ ಮಾಡಿರಬೇಕು ಎಂಬುದನ್ನು ಯೋಚನೆ ಮಾಡಬೇಕು. ಅವರ ಅವಶ್ಯಕತೆ ಏನೋ ಕಾಣುತ್ತಿಲ್ಲ. ಇಷ್ಟೊಂದು ಜನ ಕನ್‌ಸರ್ವೇಟರ್‌ಗಳು ಏತಕ್ಕೋ ಗೊತ್ತಾಗುತ್ತಿಲ್ಲ. ಸರ್ಕಾರದಲ್ಲಿ ಕೆಲಸಕ್ಕೆ ಸೇರಿಸಿಕೊಂಡಿದ್ದಾರೆ. ಅವರನ್ನು ಇಟ್ಟುಕೊಳ್ಳಲಿ, ಬಿಡಲಿ. ಆದರೆ ಇಷ್ಟು ಬಯಲು ಮಾಡಿಗತಕ್ಕ ಅಧಿಕಾರಿಗಳ ಬಗ್ಗೆ ನಾವು ಸ್ವಲ್ಪ ನೋಡಬೇಕಾಗುತ್ತದೆ. ಈ ಸರ್ಕಾರ ಅಲ್ಲ, ಹಿಂದಿನ ಸರ್ಕಾರವೂ ಏನು ಮಾಡಿದೆ ನೋಡಬೇಕು. ೩ ಸಾವಿರ ಎಕರೆ, ನಾಲ್ಕು ಸಾವಿರ ಎಕರೆ ೫ ಸಾವಿರ ಎಕರೆ ಕಾಡನ್ನು ಕಡಿಯುವುದಕ್ಕೆ ಗುತ್ತಿಗೆಗೆ ಕೊಟ್ಟಿದ್ದಾರೆ. ಹುಲ್ಲು ಬೆಳೆಯುವುದಕ್ಕೆ ಸೆಂಟ್ ಬೆಳೆಯುವುದಕ್ಕೆ ೩ ಸಾವಿರ ಎಕರೆ ಕಾಡು ಕೊಟ್ಟಿದ್ದಾರೆ. ಹೀಗೆ ಕಾಡನ್ನು ನಾಶ ಮಾಡಿ ಬೆಂಕಿ ಹಾಕಿ ಬಯಲು ಮಾಡಿದ್ದಾರೆ. ಕೂರ್ಗ್‌ನಲ್ಲಿ ಏನಾಗಿದೆ ನೋಡಿದ್ದೀರಾ? ಮೂರು ವರ್ಷದ ಹಿಂದೆ ಯಾರೋ ಒಬ್ಬ ಯಃಕಶ್ಚಿತ್ ಮನುಷ್ಯನಿಗೆ ೩ ಸಾವಿರ ಎಕರೆ ಕಾಡನ್ನು ಕೊಟ್ಟಿದ್ದಾರೆ. ಅವನು ಕಾಡಿನಲ್ಲಿ ಬರೀ ಮರಗಳಿಂದಲೇ ಅರಮನೆ ಕಟ್ಟಿಕೊಂಡು ವಾಸವಾಗಿದ್ದಾನೆ. ಇವತ್ತು ಅಷ್ಟು ಪ್ರದೇಶವನ್ನೂ ತನ್ನದು

ಎಂದು ಹೇಳುತ್ತಿದ್ದಾನೆ. ಬೇಲಿ ಹಾಕಿಕೊಂಡಿದ್ದಾನೆ. ಅವನಿಗೆ ಕೊಟ್ಟಿರುವುದು ಏತಕ್ಕೋಸ್ಕರ? ಪ್ಲೈಉಡ್ ಫ್ಯಾಕ್ಟರಿಗೆ. ಅದನ್ನು ಅವನು ಮಾಡಿದ್ದಾನಾ? ಅಲ್ಲಿರತಕ್ಕ ಬೆಲೆ ಬಾಳತಕ್ಕ ಕಾಡನ್ನು ಕಡಿದು ನಾಶ ಮಾಡಿ ಕೋಟ್ಯಾಧೀಶ್ವರನಾಗಿದ್ದಾನೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ನೀವು ಈಗ ತಂದಿರುವಂತಹ ತಿದ್ದುಪಡಿಯ ಹಿನೇ ಕಲಮಿನ ಪ್ರಕಾರ ಇಂತಹ ನ್ಯೂನತೆಗಳು ಏನು ಇವೆ, ಯಾರ್ಯಾರು ಇದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಗೌಣವಾಗಿ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ. ಯಾರು ತಪ್ಪಿತಸ್ತರು, ಅವರ ಹೆಸರುಗಳೇನು ಎಂಬುದನ್ನು ಮಾನ್ಯ ಬಸವಲಿಂಗಪ್ಪನವರು ಹೇಳಿದರೆ ಅದು ಜನರಿಗೂ ಗೊತ್ತಾಗುತ್ತದೆ. ಇದರಿಂದ ಅಧಿಕಾರಿಗಳನ್ನೂ ಕೂಡ ತಿದ್ದುವುದಕ್ಕೆ ಬರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು ಸ್ವಾಮಿ. ತಾವು ದಯಮಾಡಿ ಕೇಳಿತುಕೊಳ್ಳೋಣವಾಗಲಿ. ಹೇಳುತ್ತೇನೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಅವರ ಹೆಸರು ಇರುತ್ತದೆ. ಯಾವುದು ಇಲ್ಲ? ಎಲ್ಲಾ ವಿವರಗಳೂ ಅವರಲ್ಲೇ ಇದೆ. ಹುಣಸೂರಿನಿಂದ ಪ್ರಾರಂಭವಾಗಿ ಎಷ್ಟೆಷ್ಟು ಜನರಿಗೆ ಕೊಟ್ಟಿದ್ದಾರೆ ಎಂಬುದರ ಲಿಸ್ಟ್ ಇದೆ. ಅವರ ಹೆಸರನ್ನು ಹೇಳಬೇಕೆಂದರೆ, ಇಬ್ರಾಹಿಂ ಅಂತ ಮನುಷ್ಯ ಇದ್ದಾರೆ. ಅವನಿಗೆ ಅಡ್ರೆಸ್ಸೇ ಇಲ್ಲ. ಅಂತಹವರಿಗೆ ೩ ಸಾವಿರ ಎಕರೆ ಜಮೀನನ್ನು ಕಾಡಿನಲ್ಲಿ ಕೊಟ್ಟಿದ್ದಾರೆ. ಯಾವುದಕ್ಕೋಸ್ಕರ ಅಂದರೆ ಪ್ಲೈವುಡ್ ಕಾರ್ಖಾನೆಯನ್ನು ಮಾಡುವುದಕ್ಕೋಸ್ಕರ ಕೊಟ್ಟಿದ್ದಾರೆ. ಆದರೆ ಆತ ಯಾವ ಕಾರ್ಖಾನೆಯನ್ನೂ ಮಾಡಿಲ್ಲ. ಅಂತಹ ಒಂದು ವ್ಯವಸ್ಥೆ ಇದೆ.

ಶ್ರೀ ಎಂ. ಶ್ರೀನಿವಾಸ್.—ನಿಮ್ಮ ಕಡೆಯವರೇ ಅವರು. ನಿಮ್ಮ ಪಕ್ಷದವರೇ, ೧೯೮೩ ರಿಂದಾಚೆಯೇ ಅರಣ್ಯ ಹೋಗಿರುವುದು,

ಶ್ರೀ ಬಿ. ಬಸವಲಿಂಗಪ್ಪ.—ಅವರು ನಮ್ಮ ಪಕ್ಷವನ್ನು ಬಿಟ್ಟು ಹೋಗಿದ್ದಾರೆ. ಈಗ ಅಂತಹ ಒಂದು ವ್ಯವಸ್ಥೆ ಇದೆ, ಸರ್ಕಾರದವರು ಯಾರೋ ಒಬ್ಬರನ್ನು ಸಾಹುಕಾರರನ್ನಾಗಿ ಮಾಡುವುದಕ್ಕೆ, ಅವರು ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಅವರಿಂದ ಫಾಯಿದೆಯನ್ನು ಪಡೆಯಬೇಕೆಂಬ ಗುರಿ ಇದೆ. ನಮ್ಮ ಅರಣ್ಯವನ್ನು ಹಾಳು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಬಹಳ ಜನ ಪ್ರಯತ್ನ ಮಾಡಿದ್ದಾರೆ. ಫಾಲಿಫೈಬರ್ ಕಾರ್ಖಾನೆಯ ಬಗ್ಗೆ ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಮಾತನಾಡಿದ್ದಾರೆ. ಅವರಿಗೋಸ್ಕರ ಅರಣ್ಯವನ್ನು ಸಾಕುತ್ತಿದ್ದೇವೆ. ಎಲ್ಲಿ ನೋಡಿದರೂ ಯೂಕಲಿಪ್ಟಸ್ ಮರಗಳನ್ನು ಅವರಿಗೋಸ್ಕರ ಸಾಕುತ್ತಿದ್ದೇವೆ. ಇದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ ಅಂತ ಹೇಳದಿದ್ದರೂ, ಅವರ ವರ್ತನೆಯನ್ನು ನೋಡಿದರೆ ಇವರೂ ಅದರಲ್ಲಿ ಶಾಮೀಲಾಗಿದ್ದಾರೆ ಎಂಬ ಭಾವನೆ ಬರುತ್ತದೆ. ಆ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ. ಒಳ್ಳೆಯ ಮರಗಳನ್ನು ಕಡಿಯುವುದು, ಆ ಜಾಗದಲ್ಲಿ ಯೂಕಲಿಪ್ಟಸ್ ಮರಗಳನ್ನು ಬೆಳೆಸುವುದು ಅವರಿಗೆ ಸರಬರಾಜು ಮಾಡುವುದು ನಡೆಯುತ್ತಿದೆ. ಇದರ ಬಗ್ಗೆ ನಿಮ್ಮ ಕೆಲಸ ಏನು ಎಂಬುದನ್ನು ಹೇಳುವುದಾದರೆ, ಎಷ್ಟು ಅಗ್ರಿಮೆಂಟ್ ಮಾಡಿದ್ದಾರೆ ಎಂಬುದನ್ನು ನೋಡಿ. ನೀವು ನಿಜವಾಗಿಯೂ ಅರಣ್ಯವನ್ನು ಕಾಪಾಡಬೇಕೆಂಬ ಅಬಿಲಾಶೆ ಇರುವುದಾದರೆ ಎಷ್ಟು ಅಗ್ರಿಮೆಂಟ್‌ನ್ನು ಮಾಡಿದ್ದಾರೆ, ಈ ಕಲಮಿನ ಕ್ಲಾಸ್ ಹಿರ ಕೆಳಗೆ ಯಾರ್ಯಾರು ಈ ಒಂದು ಕಂಡೀಷನ್ ಅನ್ನು ಮುರಿದಿದ್ದಾರೆ ಅವರೆಲ್ಲರ ಅಗ್ರಿಮೆಂಟನ್ನು ಕ್ಯಾನ್ಸಲ್ ಮಾಡಿ. ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಕರ್ನಾಟಕ ರಾಜ್ಯಕ್ಕೆ ಕೀರ್ತಿ ಬರುತ್ತದೆ. ಅರಣ್ಯವನ್ನು ಕಾಪಾಡುವುದರಿಂದ ನಿಮಗೆ ಅನುಕೂಲವಾಗುತ್ತದೆ. ನಿಮ್ಮ ಅಧಿಕಾರಿಗಳಿಗೆ ಕೆಲಸವನ್ನು ಕೊಟ್ಟ ಹಾಗೆ ಆಗುತ್ತದೆ. ಕಾಡು ಪ್ರದೇಶವನ್ನು ಯಾರು ಎಲ್ಲಿ ಬೇಕಾದರೂ ಹೋಗಿ ಅತಿಕ್ರಮ ಪ್ರವೇಶ ಮಾಡಬೇಕು ಅಂತ ಇದೆಯೋ? ಅಲ್ಲ. ಆದರೆ ಇವತ್ತು ಆ ರೀತಿಯಾಗಿದೆ. ಚಿಕ್ಕಮಗಳೂರು ಜಿಲ್ಲೆ, ವೆಸ್ಟ್ರನ್ ಘಾಟ್ಸ್‌ನಲ್ಲಿ ನಾನೇ ಸರ್ವೆ ಮಾಡಿಸಿದ್ದೆ. ಆ ರೀತಿ ಸರ್ವೆ ಮಾಡಿಸಿದ್ದರ ಪ್ರಕಾರ ೨೨ ಸಾವಿರ ಎಕರೆ ಕಾಡನ್ನು ಕಡಿದು ಅಲ್ಲಿ ಪ್ಲಾಂಟೇಷನ್ ಮಾಡಿದ್ದಾರೆ. ತೋಟಗಳನ್ನು ಮಾಡಿದ್ದಾರೆ. ಅದೇ ರೀತಿ ಕೊಡಗು ಜಿಲ್ಲೆಯಲ್ಲಿ ೧೦ ಸಾವಿರ ಎಕರೆಯಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದಾರೆ. ತಾವು ಏನು ಮಾಡಬೇಕೆಂದರೆ, ಇಷ್ಟೊಂದು ಸಾವಿರ ಎಕರೆ ಕಾಡನ್ನು ಏನು ಹಾಳು ಮಾಡಿದ್ದಾರೆ ಅದನ್ನು ನಿರ್ದಾಕ್ಷಿಣ್ಯವಾಗಿ ಪುನಃ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡು ಅಲ್ಲಿ ಕಾಡನ್ನು ಬೆಳೆಸುವ ಪ್ರಯತ್ನ ಮಾಡಿದ್ದೇ ಆದರೆ, ಈ ಸರ್ಕಾರ ಹಾಗೂ ಅರಣ್ಯ ಇಲಾಖೆ ಇದ್ದುದಕ್ಕೂ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಸಾರ್ಥಕವಾಗುವುದಿಲ್ಲ. ಒಂದು ವಿಚಾರವನ್ನು

ಹೇಳುವುದಾದರೆ, ಕಾಗದದಲ್ಲಿ ಬರೆದಿದ್ದೀರಿ. ಹಸಿರು ಕಾಡನ್ನು ಬೆಳೆಸಬೇಕೆಂದು ಬರೆದಿದ್ದೀರಿ. ಅದರ ಬಗ್ಗೆ ಹೇಳುವುದಾದರೆ, ಮುಂದಿನ ೫ ವರ್ಷಗಳವರೆಗೆ ಅದರ ಉತ್ಪತ್ತಿ ನಮಗೆ ಬೇಕಾಗಿಲ್ಲ. ಸಾಧಾರಣ ೫-೬ ಕೋಟಿ ಬರಬಹುದೆಂಬುದು ನನ್ನ ಒಂದು ಅಂದಾಜು. ಹಳೆಯ ಮರಗಳನ್ನು ಮಾರುವುದರಿಂದ ಸುಮಾರಾಗಿ ೩೦ ಕೋಟಿ ಆದಾಯ ಬರಬಹುದು. ಸರ್ಕಾರಕ್ಕೆ ೩೦ ಕೋಟಿ ರೂಪಾಯಿ ಯಾವ ಲೆಕ್ಕ? ೫ ವರ್ಷಗಳವರೆಗೆ ಯಾವುದೇ ಮರಗಳನ್ನು ಕಾಡಿನಲ್ಲಿ ಕಡಿಯಬಾರದು, ಮರಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿದ್ದೇ ಆದರೆ, ಕಾಡು ತಾನೇತಾನಾಗಿ ಬರುತ್ತದೆ. ಮನುಷ್ಯರು ಪ್ರವೇಶ ಮಾಡದಿದ್ದರೆ, ತೊಂದರೆ ಕೊಡದಿದ್ದರೆ, ಮರಗಳನ್ನು ಕಡೆಯದೇ ಹೋದರೆ, ಕಾಡು ತಾನೇತಾನಾಗಿ ಬೆಳೆಯುತ್ತದೆ. ದಯಮಾಡಿ ತಾವು ಈ ಒಂದು ಕೆಲಸವನ್ನು ಮಾಡಬೇಕು. ಅದರಿಂದ ಬರತಕ್ಕ ಉತ್ಪತ್ತಿ ಇನ್ನು ಐದು ವರ್ಷಗಳವರೆಗೆ ನಮಗೆ ಬೇಕಾಗಿಲ್ಲ. ಅಂತಹ ಒಂದು ವ್ಯವಸ್ಥೆಯನ್ನು ಮಾಡಿದರೆ ನನಗೆ ಆನಂದವಾಗುತ್ತದೆ. ಇದರಿಂದ ಎಲ್ಲಿ ಕಾಡು ಇಲ್ಲವೋ ಅಲ್ಲಿ ಕಾಡನ್ನು ಬೆಳೆಸುವುದಕ್ಕೆ ಸಹಾಯಕ ವಾಗುತ್ತದೆಂದು ಹೇಳುತ್ತಿದ್ದೇನೆ.

ಈ ಒಂದು ಬಿಲ್ಲೇನು ತಂದಿದ್ದೀರಿ, ಇದರಲ್ಲಿ ಕೆಲವು ಸಾಮಾನ್ಯ ಆಗಿರುವುದು ಇದ್ದಾವೆ. ಸಾಮಾನ್ಯ ಇರುವುದಕೆಒಪ್ಪಿಗೆ ಕೊಡತಕ್ಕದ್ದು ಇದೆ. ಆ ಬಗ್ಗೆ ಮಾನ್ಯ ಪಾಟೀಲರೂ ಸಹ ಹೇಳಿದ್ದಾರೆ. ನಿಮಗೆಏನಾದರೂ ಆಸಕ್ತಿ ಇದ್ದರೆ, ಹಸಿರು ಅರಣ್ಯ ಕಾಪಾಡಬೇಕೆಂದು ಇದ್ದರೆ ಏನು ನಾನು ಎರಡು-ಮೂರು ಸಲಹೆ ಗಳನ್ನು ಕೊಟ್ಟಿದ್ದೇನೆ ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೆ ಕೊಟ್ಟು ನಮ್ಮ ಅರಣ್ಯವನ್ನುಳಿಸುವುದಕ್ಕೆ ಕೆಲಸ ಮಾಡಿ, ಒಳ್ಳೆಯದಾಗುತ್ತದೆ.

ಅಧ್ಯಕ್ಷರು.—ಈಗ ಮಂತ್ರಿಗಳಿಂದ ಉತ್ತರ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಅಂಗನವಾಡಿ ಟೀಚರ್ಸ್ ಬಗ್ಗೆ ಮಾನ್ಯ ಬಸವಣಪ್ಪ ಅವರು ಸ್ಟೇಟ್‌ಮೆಂಟ್ ಮಾಡುವವರಿದ್ದರು.

ಅಧ್ಯಕ್ಷರು.—ಇದು ಆದಮೇಲೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ.—ಕಾನೂನಿಗೆ ವಿರುದ್ಧವಾದ ಕೆಲವು ಕ್ಲಾಸ್‌ಗಳಿವೆ. ಸುಮ್ಮನೆ ಕೈ ಎತ್ತುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ನಾವು ಬಿಸನೆಸ್ ನಡೆಸಬೇಕೋ, ಬೇಡವೋ? ೨೦-೨೫ ನೋಟೀಸ್‌ಗಳನ್ನು ನಿಯಮ ೩೩೪ರ ಕೆಳಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಹೀಗೆ ಆದರೆ ಉತ್ತರ ಇಲ್ಲದೇ ವಿಧೇಯಕವನ್ನು ಮತಕ್ಕೆ ಹಾಕಬೇಕಾಗುತ್ತದೆ.

ಶ್ರೀ ಡಿ.ಎ. ಚಿನ್ನಪ್ಪ.—ಈ ವಿಧೇಯಕದ ಬಗ್ಗೆ ನಾನೂ ಮಾತನಾಡಬೇಕು.

ಅಧ್ಯಕ್ಷರು.—ಮೂರ್ನಾಲ್ಕು ಜನ ಚರ್ಚೆ ಮಾಡಿದ್ದಾರೆ.

(ಗೊಂದಲ)

SRI G. S. SHIVANANJAPPA.—How they will overcome the Indian Contract Act ಎಂಬುದು ನನ್ನ ಪ್ರಶ್ನೆ.

ಶ್ರೀ ಡಿ. ಎ. ಚಿನ್ನಪ್ಪ.—ಕಣ್ಣುಮುಚ್ಚಿಕೊಂಡು ಪಾಸ್ ಮಾಡುವುದಕ್ಕಾಗುವುದಿಲ್ಲ. ನಾಳೆ ಕೋರ್ಟಿಗೆ ಕಳುಹಿಸಿ ಅವರೇ ಸ್ಟೇ ಮಾಡಿಸುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ವಿಧೇಯಕದ ಬಗ್ಗೆ ಏನೂ ಕಾಲನಿಗದಿ ಇಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಉತ್ತರವಾದ ನಂತರ ಕ್ಲಾರಿಫಿಕೇಷನ್ ಕೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ತಾವು ಮಾಡತಕ್ಕ ಕಾನೂನು ಅದಕ್ಕೆ ವಿರುದ್ಧ ಇದ್ದರೆ ಬೇಸಿಕಲಿ............

ಅಧ್ಯಕ್ಷರು.—ಮಾನ್ಯ ಶಿವನಂಜಪ್ಪನವರಿಗೆ ಮಾತ್ರ ಮಾತನಾಡಲು ಅವಕಾಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಿವಸಕ್ಕೆ ೨೫–೩೦ ನೋಟೀಸ್‌ಗಳನ್ನು ನಿಯಮ ೩೩೪ರ ಕೆಳಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತಿದ್ದೇವೆ. ದಿನದಲ್ಲಿ ೪ ಗಮನ ಸೆಳೆಯುವ ಸೂಚನೆಗೆ ಅವಕಾಶ ಮಾಡಿ ಕೊಟ್ಟಿದ್ದೇನೆ. ಐದೂವರೆ ಗಂಟೆವರೆವಿಗೂ ನಾವು ಕೊಡೋಣ. ತಮಗೆಲ್ಲಾ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗ ಚರ್ಚೆ ಮುಕ್ತಾಯವಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಎಲ್ಲರೂ ಕುಳಿತುಕೊಳ್ಳಿ. ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನೀವು ನಾಲ್ಕೈದು ಜನರಿಗೂ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅರಣ್ಯ ಪ್ರದೇಶದಿಂದ ಬಂದಿರತಕ್ಕವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ. ಅಧಿವೇಶನ ಮೂರು ದಿವಸ ಮುಂದಕ್ಕೆ ಹೋಗಲಿ. ಮಾನ್ಯ ಚಿನ್ನಪ್ಪನವರು ಕೊಡಗಿನಿಂದ ಬಂದಿದ್ದಾರೆ. ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ನಾನು ಬಿಸಿನೆಸ್ ನಡೆಸುವುದು ಬೇಡವೇ? ಹೇಗೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಬಿಸಿನೆಸ್ ನಡೆಸಲಿಕ್ಕೆ ಒಪ್ಪಿಕೊಂಡು ಸಹಕಾರ ಕೊಡುತ್ತಿದ್ದೇವೆ.

ಅಧ್ಯಕ್ಷರು.—ನೀವು ಸಹಕಾರ ಕೊಟ್ಟಿದ್ದೀರಿ. ಈಗ ಏತಕ್ಕೆ ಸಹಕಾರ ಕೊಡುವುದಿಲ್ಲ ?

ಶ್ರೀ ಡಿ. ಎ. ಚಿನ್ನಪ್ಪ.—ನಾನು ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಕೆ.ಎಚ್. ಪಾಟೀಲ್.—ತಾವು ಉದಾರಭಾವನೆಯನ್ನು ತಾಳಿದ್ದೀರಿ. ೫ ನಿಮಿಷ ಅವಕಾಶ ಕೊಡಿ, ಮಾನ್ಯ ಚಿನ್ನಪ್ಪನವರು ಅರಣ್ಯ ಪ್ರದೇಶದಿಂದ ಬಂದವರು ಅವರೊಬ್ಬರಿಗೆ ಅವಕಾಶ ಕೊಡಿ.

ಅಧ್ಯಕ್ಷರು.—ತಾವೊಬ್ಬರು ಮಾತನಾಡಿ.

ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ನಾನು ಅರಣ್ಯ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುತ್ತಾ, ಕರ್ನಾಟಕದ ಕಾಡಿನ ನಾಶಕ್ಕೆ ಮೂಲ ಕಾರಣರಾಗಿರತಕ್ಕವರು ಅಧಿಕಾರಿಗಳು ಎಂದು ಹೇಳಿದರೆ ಯಾರೂ ತಪ್ಪಾಗಿ ತಿಳಿದುಕೊಳ್ಳಬಾರದೆಂದು ಹೇಳುತ್ತೇನೆ. ಕರ್ನಾಟಕದಲ್ಲಿ ಅರಣ್ಯ ಬೆಳೆಸುತ್ತೇವೆಂದು ಗ್ರೀನ್ ಫಾರೆಸ್ಟ್‌ನಲ್ಲಿ ಮರಗಿಡಗಳನ್ನು ಬೆಳೆಸುವುದನ್ನು ತಪ್ಪಿಸಿ ಬೇರೆ ಕಡೆಗಳಲ್ಲಿ ಫಾರೆಸ್ಟ್ ಮಾಡುವುದಕ್ಕೋಸ್ಕರ ಲಕ್ಷಾಂತರ ಟನ್ ಮರಗಳನ್ನು ಕಡಿದು ಹೊಸ ಪ್ಲಾಂಟೇಷನ್ ಮಾಡುತ್ತಿದ್ದಾರೆ. ಇವತ್ತು ಕರ್ನಾಟಕದಲ್ಲಿ ಎಲ್ಲಿಯಾದರೂ ಫಾರೆಸ್ಟ್ ಉಳಿದಿದೆ ಅಂದರೆ, ಅದು ಜನರಿಂದ ಉಳಿದಿದೆಯೆಂದು ಹೇಳಬಹುದು, ಫಾರೆಸ್ಟ್ ಅಧಿಕಾರಿಗಳಿಂದ ಉಳಿದಿಲ್ಲ. ಗೇಣಿಮಲೈನಲ್ಲಿ ೩೭ ಸಾವಿರ ಎಕರೆಯಲ್ಲಿ ಜನತೆ ಏಲಕ್ಕಿಯನ್ನು ಬೆಳೆಸಿಕೊಂಡು ಅಲ್ಲಿರತಕ್ಕ ಮರಗಳನ್ನು ರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಈಗ ಮೂರು ನಾಲ್ಕು ವರ್ಷಗಳಿಂದ ಗೇಣಿಮಲೈನಲ್ಲಿರತಕ್ಕ ಮರಗಳನ್ನು ಇವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅಲ್ಲಿ ಮರಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಗೇಣಿಮಲೈನಲ್ಲಿ ಮರಗಳನ್ನು ಕಡಿಯಲಿಕ್ಕೆ ೨೦ ವರ್ಷ ಲೀಸ್ ಕೊಟ್ಟಿದ್ದಾರೆ. ೩೭ ಸಾವಿರ ಎಕರೆ ಅರಣ್ಯವನ್ನು ಕಾವೇರಿ ನದಿ ಹುಟ್ಟುವ ಪ್ರಾರಂಭದಿಂದ ಏಲಕ್ಕಿ ಬೆಳೆಸುವಂತಹ ಜನರು ಬೆಳೆಸುತ್ತಿದ್ದಾರೆ. ಅವರು ಸರ್ಕಾರಕ್ಕೆ ಕಂದಾಯವನ್ನು ಕಟ್ಟುತ್ತಿದ್ದಾರೆ. ಇವತ್ತು ಏಲಕ್ಕಿಯನ್ನು ಕೇರಳದಿಂದ ತಂದು ಕದ್ದು ಮಾರುತ್ತಿದ್ದಾರೆ ಅದರ ಬಗ್ಗೆ ಅಧಿಕಾರಿಗಳು ಗಮನಹರಿಸಿಲ್ಲ. ಯಾರು ಕಂಟ್ರಾಕ್ಟ್ ಮಾಡುತ್ತಿದ್ದಾರೆ ಅವರಿಗೆ ಕೊಡುತ್ತಿಲ್ಲ. ಯಾರ್ಯಾರು ಸ್ವಂತ ಮರಗಳನ್ನು ಬೆಳೆಸಿದ್ದಾರೆ, ಆ ಮರಗಳನ್ನು ಕಡಿಯಲಿಕ್ಕೆ ಅವಕಾಶವಿಲ್ಲ. ಮರಗಳನ್ನು ಬೆಳೆಸಿರತಕ್ಕ ಬೋನಫೈಡೀಸ್‌ಗಳಿಗೆ ಮರಗಳನ್ನು ಕಡಿಯಲಿಕ್ಕೆ, ಕೊಯ್ಯಲಿಕ್ಕೆ ಕಷ್ಟವಾಗಿದೆ. ಕರ್ನಾಟಕದಲ್ಲಿ ಮೈನರ್ ಪ್ರಾಜೆಕ್ಟ್‌ಗಳನ್ನು ಮಾಡಲಿಕ್ಕೆ ಮರಗಳನ್ನು ಕಡಿಯಲಾಗುತ್ತಿದೆ, ಜನರು ಅರಣ್ಯದಲ್ಲಿ ಕಳ್ಳತನದ ಮೂಲಕ ಮರಗಳನ್ನು

ಕಡಿದು ಹಾಕುತ್ತಿದ್ದಾರೆ. ರಂಟವಾಳ, ಸೀಗೆಕಾಯಿ ಮತ್ತು ನಲ್ಲಿಕಾಯಿ ಮರಗಳಿಂದ ಬರತಕ್ಕ ಕಾಯಿಗಳನ್ನು ಕಿತ್ತು ಮಾರಾಟ ಮಾಡತಕ್ಕ ವ್ಯವಸ್ಥೆ ಇದೆ. ಕೊಡಗಿನಲ್ಲಿ ಆನೆಕಾಡು ಎಂದು ದೊಡ್ಡ ಫಾರೆಸ್ಟ್ ಇತ್ತು. ಕುಶಾಲನಗರದಿಂದ ಅದು ಪ್ರಾರಂಭವಾಗುತ್ತದೆ. ಅಲ್ಲಿ ಆನೆಗಳು ತುಂಬಾ ಇದ್ದವು. ಅರಣ್ಯ ಅಧಿಕಾರಿಗಳು ಅಲ್ಲಿನ ಕಾಡನ್ನು ಕಂಪ್ಲೀಟ್ ಕಡಿದು ಗಂಧದ ಮರಗಳನ್ನು ಬೆಳೆಸುತ್ತೇವೆಂದು ಹೇಳಿದರು. ಆದರೆ ಅಲ್ಲಿ ಈಗ ಏನೂ ಬೆಳೆಸಿಲ್ಲ. ಅಲ್ಲಿ ಯಾವುದೂ ಬೆಳೆಯುತ್ತಿಲ್ಲ.

ಹೀಗೆ ನಾನಾ ರೀತಿಯಿಂದ ಅಧಿಕಾರಿಗಳ ಪ್ಲಾನ್‌ನಿಂದ ಮರಗಳನ್ನು ಕಡಿದು ಅರಣ್ಯ ನಾಶವಾಗುತ್ತಿದೆ. ಇಷ್ಟೇ ಅಲ್ಲ, ಕೆಲವು ಕಂಟ್ರಾಕ್ಟ್‌ದಾರರೊಡನೆ ಅಧಿಕಾರಿಗಳು ಶಾಮೀಲಾಗಿ ಸರ್ಕಾರ ಒಂದು ಮರ ಕಡಿಯುವುದಕ್ಕೆ ಅವಕಾಶ ಕೊಟ್ಟಿದ್ದರೆ, ಇವರು ಹತ್ತು ಮರಗಳನ್ನು ಕಡಿಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಕಾರಣಗಳಿಂದಾಗಿ ವರ್ಷ ವರ್ಷ ಮರಗಳ ಸಂಖ್ಯೆ ಕಡಿಮೆಯಾಗುತ್ತಿದೆ. ದೇವರಕಾಡು ಮರಗಳಿಂದ ಬರತಕ್ಕಂಥ ಆಸ್ತಿಯನ್ನು ದೇವಸ್ಥಾನಕ್ಕೆ ಕೊಡಬೇಕೆಂದು ತೀರ್ಮಾನವಾಗಿದ್ದರೂ ಕೂಡ ೧೫ ಲಕ್ಷ ರೂಪಾಯಿ ಆದಾಯದಲ್ಲಿ ಒಂದು ಕಾಸನ್ನೂ ಕೂಡಾ ದೇವಸ್ಥಾನಕ್ಕೆ ಕೊಡುತ್ತಿಲ್ಲ. ಈ ದೇವಸ್ಥಾನದ ಭಾಗದಲ್ಲಿ ಬೇಲಿ ಹಾಕಬೇಕೆಂದು ತೀರ್ಮಾನವಾಗಿದೆ. ಆದರೆ ಇನ್ನೂ ಕೂಡ ಏನೂ ಮಾಡಿಲ್ಲ. ಇನ್ನು ಈ ವಾಚರ್ಸ್ ಬಗ್ಗೆ ಹೇಳಬೇಕೆಂದರೆ, ಇವರ ಕಾಡನ್ನು ವಾಚ್ ಮಾಡತಕ್ಕಂಥಾದ್ದು. ಇವರಿಗೆ ದಿನಕ್ಕೆ ೧೫ ರೂಪಾಯಿ ಸಂಬಳ. ಇವರಿಗೆ ಮುನ್ನೂರು ರೂಪಾಯಿ ಕೊಟ್ಟು ನಾಲ್ಕು ತಿಂಗಳಿಗೆ ಬರಬೇಕಾದ ಸಂಬಳ ಬಂದಿದೆ ಎಂದು ಸೈನ್ ಮಾಡಿಸಿಕೊಂಡಿದ್ದಾರೆ. ಈ ರೀತಿಯಾಗಿ ಅಧಿಕಾರಿಗಳು ನಾನಾ ರೀತಿಯಲ್ಲಿ ತೊಂದರೆ ಮಾಡುತ್ತಿದ್ದಾರೆ. ಎಲ್ಲಿ ಅಧಿಕಾರಿಗಳು ಜಾಸ್ತಿಯಾಗುತ್ತಾರೋ, ಅಲ್ಲಿ ಜನತೆಗೆ ತೊಂದರೆಯಾಗುತ್ತದೆ. ಕಾಡು ನಾಶವಾಗುತ್ತಿದೆ. ಕಾಡು ನಾಶವಾದರೆ, ಮಳೆಯಾಗುವುದಿಲ್ಲ. ಮಳೆಯಾಗದಿದ್ದರೆ, ಬೆಳೆಯಾಗುವುದಿಲ್ಲ. ಕೊಡಗಿನಲ್ಲಿ ಮಳೆಯಿಲ್ಲದೆ ಅಲ್ಲೂ ಕೂಡಾ ಈ ವರ್ಷ ಬರಗಾಲ ಬಂದಿದೆ. ಮರಗಳನ್ನು ರಕ್ಷಣೆ ಮಾಡತಕ್ಕಂಥಾದ್ದು ಅಧಿಕಾರಿಗಳ ಕೈಯಲ್ಲಿದೆ. ಮರಗಳ ಮೇಲೆ ಜನರಿಗೆ ಅಭಿಮಾನ ಇದೆ. ಆದ್ದರಿಂದ ನಾನು ಈ ಬಿಲ್‌ಅನ್ನು ಒಪ್ಪಿದರೂ ಕೂಡ ಈ ಕೆಲವೊಂದು ಸಲಹೆಗಳನ್ನು ಕೊಟ್ಟು ಗ್ರೀನ್ ಬೆಲ್ಟ್‌ನಲ್ಲಿ ಇರತಕ್ಕಂಥ ಮರಗಳನ್ನು ಕಡಿಯಲಿಕ್ಕೇ ಕೂಡದು. ಮತ್ತು ಮರಗಳನ್ನು ಟ್ರಾನ್ಸ್‌ಫರ್ ಮಾಡಲಿಕ್ಕೆ ಕೂಡದು. ಎಂದು ಆದೇಶವನ್ನು ಹೊರಡಿಸಬೇಕು. ನಾನು ಹೇಳುವುದಾದರೆ, ಇಡೀ ಮರಗಳನ್ನು ಸರ್ಕಾರ ರಾಷ್ಟ್ರೀಕರಣ ಮಾಡಬೇಕು. ಫಾರೆಸ್ಟ್ ಲ್ಯಾಂಡ್‌ನಲ್ಲಿ ಮರಗಳನ್ನು ನ್ಯಾಶನಲೈಸೇಷನ್ ಮಾಡಬೇಕೆಂದು ಹೇಳಿ ನನಗೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ನಾನು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಲೋಪದೋಷಗಳ ಬಗ್ಗೆ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆ ಅರಣ್ಯಗಳಿಂದ ಆವರಿಸಿರುವಂಥ ಪ್ರದೇಶ. ಅರಣ್ಯ ಭಾಗವಾಗಿರುವ ಕಾರಣ ಇಲ್ಲಿ ಹೆಚ್ಚು ಮಳೆಯಾಗುತ್ತದೆ ಎನ್ನುವ ನಂಬಿಕೆ ಕೂಡ ಇದೆ. ಆದರೆ ಕಳೆದ ಮೂರು ವರ್ಷಗಳಿಂದ ಸತತವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಸುಬ್ರಮಣ್ಯ ರೇಂಜ್, ಉಪ್ಪಿನಂಗಡಿ ರೇಂಜ್, ಬೆಳ್ತಂಗಡಿ ರೇಂಜ್‌ಗಳಲ್ಲಿ ಬೆಂಕಿ ಹತ್ತಿ ದೊಡ್ಡದಾಗಿ ಮರಗಳು ಉರಿದಿರುವ ಬಗ್ಗೆ ಈ ಸದನದಲ್ಲಿ ನಾನು ಎರಡು ಸಲ ಪ್ರಸ್ತಾಪ ಮಾಡಿದಾಗ ಶ್ರೀ ಜೀವಿಜಯ ಅವರು ಅರಣ್ಯ ಮಂತ್ರಿಯಾಗಿದ್ದರು. ಆಗ ಅವರು ನಾವು ಫೈರ್ ಮಾರ್ಕ್ ಮಾಡದೇ ಇದ್ದುದರಿಂದ ಬೆಂಕಿ ಹತ್ತಿತು ಎಂದು ಹೇಳಿದರು. ಕಳೆದ ಏಪ್ರಿಲ್ ಮೇ ತಿಂಗಳಿನಲ್ಲಿ ಕೂಡ ಇದು ಪುನರಾವರ್ತನೆಯಾಗಿ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ಸತತವಾಗಿ ಒಂದು ತಿಂಗಳಿನಿಂದ ಬೆಂಕಿ ಹಿಡಿದು ಕಾಡು ಸುಟ್ಟುಹೋಗುತ್ತಿರತಕ್ಕಂಥ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ತು ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಅಲ್ಲಿ ಬಂದಂಥ ಡಿ.ಎಫ್.ಓ. ಅವರಿಂದ ರಿಪೋರ್ಟ್ ಕಲೆಕ್ಟ್ ಮಾಡಬೇಕು ಮತ್ತು ವಿಚಾರ ಮಾಡಬೇಕೆಂದು ಎಲ್ಲಾ ಜಿಲ್ಲಾ ಪರಿಷತ್ತಿನ ಸದಸ್ಯರೂ ಸಹ ಒಂದು ನಿರ್ಣಯ ಮಾಡಿ ಕಳಿಸಿಕೊಟ್ಟು ಮುಂದಿನ ಸಭೆಯಲ್ಲಿ ವಿವರಗಳನ್ನು ಕೊಡಬೇಕೆಂದು ಹೇಳಲಾಯಿತು. ಆದರೆ ಜಿಲ್ಲಾ ಪರಿಷತ್ತಿಗೂ ಮತ್ತು ಅರಣ್ಯ ಇಲಾಖೆಗೂ ಸಂಬಂಧ ಇಲ್ಲ ಎನ್ನುವ ಮಾಹಿತಿ ಮುಂದಿನ ಸಭೆಯಲ್ಲಿ ಬಂದಿತು. ನಂತರ ಸರ್ಕಾರದಿಂದ, ಇಲಾಖೆಯ ಮಟ್ಟದಲ್ಲಿ ಒಂದು ನಿರ್ದೇಶನ ಕೂಡ ಬಂದಿತು. ಏನೆಂದರೆ, ಎನ್‌ಆರ್‌ಇಪಿ, ಎಲ್‌ಆರ್‌ಇಜಿಪಿಯಲ್ಲಿ ಅರಣ್ಯ ಇಲಾಖೆಗೆ ಕೊಡುವಂಥ ದುಡ್ಡಿನ ಮಟ್ಟಿಗೆ

ಮಾತ್ರ ಚರ್ಚೆ ಮಾಡಬೇಕು, ಬೆಂಕಿ ಅಥವಾ ಕಳ್ಳತನ ಬಗ್ಗೆ ಜಿಲ್ಲಾ ಪರಿಷತ್ತು ಚರ್ಚೆ ಮಾಡಬಾರದು ಎನ್ನುವ ರೀತಿಯಲ್ಲಿ ನಿರ್ದೇಶನ ಬಂದಿತು. ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ಎಂದೂ ಕೂಡ ಮಳೆ ಕಡಿಮೆಯಾದಂಥ ಪರಿಸ್ಥಿತಿ ಇಲ್ಲ. ಆದರೆ ಕಳೆದ ಐದು ವರ್ಷಗಳ ಒಟ್ಟು ಮಳೆಯ ಸರಾಸರಿ ಲೆಕ್ಕ ತೆಗೆದುಕೊಂಡು ನೋಡಿದರೆ ಈ ವರ್ಷ ೪೮ ಪರ್ಸೆಂಟ್‌ನಷ್ಟು ಮಳೆ ಕಡಿಮೆ ಆಗಿದೆ.

ಸಂಖ್ಯದಲ್ಲಿ ೫೨ ಪರ್ಸೆಂಟ್ ಕಡಿಮೆಯಾಗಿದೆ. ಸರಿಯಾಗಿ ಕೃಷಿ ಮಾಡುವಂಥ ಅವಕಾಶ ಆಗಲಿಲ್ಲ. ಬಿತ್ತನೆ ಕೆಲಸ ಆಗಲಿಲ್ಲ. ಸರಿಯಾದ ಫಸಲು ಬರುವಂತಹ ಬೇಸಾಯ ಮಾಡುವಂಥ ಸಂದರ್ಭ ಆಗಲಿಲ್ಲ. ನಮ್ಮ ಕಾಡಿನಿಂದ ಒಂದು ಹೊರೆ ಕಡಿದರೆ, ದೊಡ್ಡ ಕೇಸ್ ಹಾಕುತ್ತಾರೆ. ಕೋಟ್ಯಾಂತರ ರೂಪಾಯಿ ನಷ್ಟ ಆಗುವ ಸಂದರ್ಭದಲ್ಲಿ, ಇಡೀ ಕಾಡು ಸುಟ್ಟು ಹೋಗುವ ಸಂದರ್ಭದಲ್ಲಿ, ಇಲಾಖೆಯವರು ಹತೋಟಿ ಮಾಡದೇ ಇರುವುದು ವಿಷಾದನೀಯ. ಜನರಲ್ಲಿ ಒಂದು ಅಭಿಪ್ರಾಯ ಬಂದಿದೆ. ಕಳ್ಳಸಾಗಾಣಿಕೆದಾರರು, ಬೆಂಕಿ ಹಾಕಿ ಬುಡವನ್ನೇ ನಿರ್ಮೂಲ ಮಾಡುವುದಕ್ಕೆ ಈ ರೀತಿಯ ಕೆಲಸ ಮಾಡುತ್ತಿದ್ದಾರೆ ಎನ್ನುವ ರೀತಿ ಸಾರ್ವಜನಿಕರಿಗೆ ಅಭಿಪ್ರಾಯ ಇದೆ.

ಕೆಲವೊಂದು ದೃಷ್ಟಿಯಲ್ಲಿ ಕಳ್ಳಸಾಗಾಣಿಕೆ ಯಾರು ಮಾಡುತ್ತಾರೆ, ಅವರಿಗೆ ಸರ್ಕಾರದಿಂದ ಉತ್ತೇಜನ ಕೊಡುವ ಕಾರ್ಯಕ್ರಮ ಕೂಡ ಆಗುತ್ತದೆ. ಸರ್ಕಾರದ ಮಟ್ಟದಲ್ಲಿ ಮಿಲ್ಲಿಗೆ ಯಾವುದೇ ರೀತಿಯ ಲೈಸೆನ್ಸ್ ಕೊಡುವುದು ಬೇಡ ಎನ್ನುವುದು ಇದ್ದರೂ ಕೂಡ ಅವರಿಗೆ ಪ್ರೋತ್ಸಾಹ ಕೊಡುವಂಥ ತಪ್ಪು ಅಭಿಪ್ರಾಯ ಬರುತ್ತದೆ. ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ. ಯೋಜನೆ ಮುಖಾಂತರ ೩೦ ಪರ್ಸೆಂಟ್ ದುಡ್ಡನ್ನು ತಂದು ಅರಣ್ಯ ಬೆಳೆಸಬೇಕಾದುದು ಎಂದು ಇದ್ದರೂ ಕೂಡ ಈ ಹಣ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಇದರಲ್ಲೂ ಹೆಚ್ಚಾಗಿ ೧೦ ಪರ್ಸೆಂಟ್ ಕೂಡ ಈ ಕೆಲಸಕಾರ್ಯಗಳಿಗೆ ವಿನಿಯೋಗವಾಗುತ್ತಿಲ್ಲ. ವನ್ಯ ಸಂರಕ್ಷಣೆ ಮಾಡುವ ದೃಷ್ಟಿಯಿಂದ ಸಸಿ ನೆಡುವ ಕಾರ್ಯಕ್ರಮವನ್ನು ಮಾತ್ರ ಸಾಂಕೇತಿಕವಾಗಿ ಮಾಡುತ್ತಿದ್ದಾರೆ. ನಮ್ಮಲ್ಲಿ ಇದ್ದಂಥ ಅರಣ್ಯ ಸರಿಯಾದ ರೀತಿಯಲ್ಲಿ ಉಳಿಸಿಕೊಂಡು ಬರುವಂಥ ಕೆಲಸ ಮಾತ್ರ ಆಗುತ್ತಿಲ್ಲ. ಸರ್ಕಾರ ದಿಟ್ಟವಾದ ನಿಲುವನ್ನು ಕೈಗೊಳ್ಳುವುದಿಲ್ಲ, ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ಹಾಕಿಕೊಂಡಿಲ್ಲವೆಂದು ಹೇಳಿ ಇನ್ನು ಮುಂದಾದರೂ ಇವುಗಳ ಕಡೆ ಹೆಚ್ಚಿನ ಗಮನವನ್ನು ಮಾನ್ಯ ಸಚಿವರು ಹರಿಸುತ್ತಾರೆಂದು ಆಶಿಸುತ್ತೇನೆ. ಮಾನ್ಯ ಬಾಗಲಕೋಟೆಯವರು ಹೊಸಬರು. ಅವರು ಒಮ್ಮೆ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಡಬೇಕು. ಅಲ್ಲಿಯ ಅಧಿಕಾರಿಗಳನ್ನು ಕರೆದು ಕೇಳಬೇಕು. ಎಷ್ಟು ತೊಂದರೆಗಳಾಗಿವೆ, ಎಷ್ಟು ನಷ್ಟವಾಗಿದೆ, ಎಂಬುದನ್ನು ತಿಳಿದುಕೊಂಡು ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳಬೇಕು. ನಮ್ಮಲ್ಲಿರುವಂಥ ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳುವ ಸಲುವಾಗಿ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಯಾವುದೇ ರೀತಿಯಿಂದ ಅರಣ್ಯ ಸಂಪತ್ತನ್ನು ಇದುವರೆಗೆ ವಿಲೇವಾರಿ ಮಾಡುತ್ತಿರಲಿಲ್ಲವೇ ? ಒಂದು ವೇಳೆ ವಿಲೇವಾರಿ ಮಾಡುವಾಗ ಅವರಿಗೆ ಬಂದ ಕಷ್ಟ ಏನು ? ಈ ಕಾನೂನು ತರುವುದಕ್ಕೆ ಇದ್ದ ಕಾರಣಗಳೇನು ಎಂಬುದನ್ನು ಹೇಳಬೇಕು, ಈ ಕಾನೂನು ತರುವುದಕ್ಕೆ ಮೊದಲು Indian Contract Actನಲ್ಲಿ ಹೇಳಿದೆ ಎಂಬುದನ್ನು ನೋಡಬೇಕಾಗಿತ್ತು. When once offer is accepted the contract will be concluded. ಎಂಬ ವಿಷಯವನ್ನು ಗಮನಿಸಬೇಕು ಆಗ ನಮ್ಮ ವಿಚಾರ ಧಾರೆ ಏನಿತ್ತು ಎಂದರೆ, ಸರ್ಕಾರಕ್ಕೆ ಆದಾಯ ಕಡಿಮೆ ಆದಾಗ, ಅಥವಾ ಆಕ್ರಮಿಸಲ್ಪಡತಕ್ಕ ಕೆಲಸಕ್ಕೆ ಏನಾದರೂ ಅಡ್ಡಿ ಆತಂಕಗಳು ಬಂದಾಗ, ಕಂಟ್ರಾಕ್ಟ್ ಕ್ಯಾನ್ಸಲ್ ಮಾಡಬೇಕೆಂದು ೩-೪ ಕಲಂಗಳನ್ನು ತಂದಿದ್ದೀರಿ, ಉದ್ದೇಶ ಒಳ್ಳೆಯದು. ಆದರೆ ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್ ಏನಿದೆ ಅದನ್ನು ಹೇಗೆ ತಾವು ಓವರ್ ಕಮ್ ಮಾಡುತ್ತೀರಿ ಎಂಬುದನ್ನು ತಾವು ರಿಪ್ಲೈ ಕೊಡುವಾಗ ಸ್ಪಷ್ಟವಾಗಿ ತಿಳಿಸಬೇಕೆಂದು ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡುತ್ತಾ, ತುಮಕೂರು ಜಿಲ್ಲೆಯ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ಕರ್ನಾಟಕದಲ್ಲಿ ಸಿದ್ಧರಬೆಟ್ಟ ಒಂದು ಹೆಸರಾದ ಸ್ಥಳ. ಯಾವುದೇರೀತಿಯ ಖಾಯಿಲೆಗಳು ಬಂದರೆ, ಇಲ್ಲಿಗೆ ಬಂದು ೪೮ ದಿವಸ ಇದ್ದು, ಅಲ್ಲಿನ ಗಿಡಮೂಲಿಕೆಗಳನ್ನು ತಂದರೆ ಹುಷಾರಾಗುತ್ತಿತ್ತು. ಇದು ಪ್ರೊಜೆಕ್ಟೆಡ್ ಏರಿಯಾ, ಇಲ್ಲಿ ಗಿಡಮೂಲಿಕೆಗಳು ಬಹಳ ಚೆನ್ನಾಗಿ ಬೆಳೆಯತಕ್ಕ ಕಾಡು ಇದೆ. ಆದುದರಿಂದ ಇಲ್ಲಿ ಕಾಡು ಬೆಳಸಲಿ ಮಾನ್ಯ ಬಾಗಲಕೋಟೆಯವರು ಒಳ್ಳೆಯ ನನಗೆ ಗೊತ್ತು. ಹಾಗೆಯೇ ಸಿಪ್ಪರ ಬೆಟ್ಟ ಕಾಡಿನ ಬಗ್ಗೆಯೂ ಬಿಗಿಯಾದ ಮನುಷ್ಯರು ಎಂಬುದು.

ಒಂದು ಬಿಗಿ ಧೋರಣೆ ತೆಗೆದು ಕೊಂಡು, ಈ ಕಾಡನ್ನು ಜೀರ್ಣೋದ್ಧಾರ ಮಾಡಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

೫-೩೦ ಪಿ. ಎಂ.

ಅಲ್ಲಿ ಶಿಮ್ಮಲಾಪುರ ಫಾರೆಸ್ಟ್ ಎಂದು ಇದೆ. ಇವತ್ತೂ ಕೂಡಾ ಪ್ರತಿದಿನ ಎರಡು ಲಾರಿ ಲೋಡ್ ಕಟ್ಟಿಗೆ ಅಲ್ಲಿಂದ ಬರುತ್ತಿವೆ. ಮೂರು ನಾಲ್ಕು ಲಾರಿ ಲೋಡ್ ಸೌದೆ ಸುಟ್ಟು ಇಜ್ಜಲು ಮಾಡಿಕೊಂಡು ಸಾಗಿಸುತ್ತಿದ್ದಾರೆ. ಇದು ಸರಕಾರಕ್ಕೂ ಗೊತ್ತು, ಅಧಿಕಾರಿಗಳಿಗೂ ಗೊತ್ತು. ಅದು ಯಾವ ಲಾರಿಗಳೂ ಎಂದು ಗೊತ್ತು. ಅಲ್ಲಿಯಿಂದ ನೇರವಾಗಿ ಬೆಂಗಳೂರಿಗೆ ಇಜ್ಜಲು ಮೂಟೆ ತುಂಬಿಕೊಂಡು ಬರುತ್ತಿವೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ಗಿಡ ಬೆಳೆಸಬೇಕೆಂದು ಕಾಡು ಬದಲೆ ಗಿಡ ಬೆಳೆಸುತ್ತಿದ್ದೀರಿ. ಅದು ಮೂರು ವರ್ಷ ಇರುತ್ತದೆ, ನಾಲ್ಕನೇ ವರ್ಷ ಒಣಗಿ ಹೋಗುತ್ತದೆ. ಸ್ಯಾಂಕಿ ರೋಡ್ ಬಂಡ್‌ನಲ್ಲಿ ಬೆಳೆಸಿದ್ದೀರಿ. ತುಮಕೂರಿನಲ್ಲಿ ಬೆಳೆಸಿದ್ದೀರಿ. ಒಂದೊಂದು ಗಿಡ ಬೆಳೆಯಲು ೧೦೦ ರಿಂದ ೧೫೦ ರೂಪಾಯಿ ಖರ್ಚಾಗುತ್ತದೆ. ಇವು ಬೇಗ ಒಣಗಿ ಹೋಗುತ್ತವೆ ಇದರಿಂದ ಕಟ್ಟಿಗೆ ಸಹಿತ ಆಗುವುದಿಲ್ಲ ಇದು ಬಹಳ ಅನ್ಯಾಯದ ವಿಚಾರ, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ರಸ್ತೆ ಪಕ್ಕದಲ್ಲಿ ನೀವು ಹಾಕುವುದು ಎರಡು ರೀತಿಯ ಮರ ಮಾತ್ರ. ಒಂದು ರೈನ್‌ಟ್ರೀ ಇನ್ನೊಂದು ಗುಲ್‌ಮೊಹರ್. ಯಾರ ಪ್ರೀತಿಗೆ, ಯಾರನ್ನು ಸಂತುಷ್ಟಿಪಡಿಸುವುದಕ್ಕೆ ನೀವು ಈ ಗಿಡಗಳನ್ನು ಹಾಕುತ್ತಿದ್ದೀರಿ. ಯಾರಾದರೂ ಮರಗಿಡಗಳ ಪರಿಚಯ ಇಲ್ಲದ ಮಂತ್ರಿಗಳು ಬಂದರೆ, ಅವರು ಪರವಾಗಿಲ್ಲ, ಕರ್ನಾಟಕ ಸರಕಾರದವರು ಒಳ್ಳೆಯ ಗಿಡ ಬೆಳೆಸಿದ್ದಾರೆ ಎಂದು ಹೇಳಬಹುದು. ಇಷ್ಟೇ ಆಗುವುದು. ಇದರ ಬದಲು ಹುಣಸೆ ಗಿಡ ಹಾಕಿ ಮಾವಿನ ಗಿಡ ಹಾಕಿ, ನೇರಳೆ ಗಿಡ ಹಾಕಿ, ಬೇವಿನ ಗಿಡ ಹಾಕಿ ಇವುಗಳನ್ನು ನೀವು ಏತಕ್ಕೆ ಹಾಕಬಾರದು? ಇವು ಮುಂದೆ ಬೆಳೆಯುತ್ತಾ ಬೆಳೆಯುತ್ತಾ ಸರ್ಕಾರಕ್ಕೆ ಆದಾಯ ಕೊಡುತ್ತವೆ, ಇಂತಹ ಸಾರ್ವಜನಿಕರಿಗೂ ಅನುಕೂಲವಾಗುತ್ತದೆ, ಪ್ರಾಣಿ ಪಕ್ಷಿಗಳಿಗೂ ಅನುಕೂಲವಾಗುತ್ತದೆ. ಮರಗಳನ್ನು ಬೆಳೆಸಿ, ಕಾಡಿನಲ್ಲಿ ಮರಗಳನ್ನು ಹರಾಜು ಹಾಕುತ್ತಿದ್ದೀರಿ, ಆದರೆ ಟೆಂಡರ್ ಮೂಲಕ ಹಾಕಿದರೆ ತಪ್ಪೇನಾಗುತ್ತದೆ. ಇಲ್ಲಿ ಏನೋ ಅನುಮಾನ ಇದೆ ಬೇಕಾದವರಿಗೆ ಕೊಡಬಹುದು, ಬೇಡವಾದವರಿಗೆ ವಜಾ ಮಾಡಬಹುದು ಎಂಬ ಬಿಗಿಯನ್ನು ನಿಮ್ಮ ಕೈಯಲ್ಲಿಟ್ಟು ಕೊಳ್ಳುವುದಕ್ಕೆ ಮಾಡಿದ್ದೀರಿ ಎಂಬ ಅನುಮಾನ ಬರುತ್ತದೆ. ಇದು ೩೫-೪೦ ವರ್ಷಗಳಿಂದ ನಡೆದುಕೊಂಡು ಬಂದಿದೆ, ಇದರ ಬಗ್ಗೆ ಲೋಪದೋಷ ಏನಾದರೂ ಇದೆಯೇ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದಾಗಿತ್ತು, ಆದರೆ ಹೇಳಿಲ್ಲ. ನೂರಾರು ಎಕರೆ, ಸಾವಿರಾರು ಎಕರೆ ಕಾಡನ್ನು ಉದ್ದಿಮೆಗಾರರಿಗೆ ಲೀಸ್ ಕೊಡುವುದನ್ನು ಕರ್ನಾಟಕ ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಿಲ್ಲಿಸಬೇಕೆಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ. ಒಂದು ಕಡೆಗೆ ಕಾಡನ್ನು ಬೆಳೆಸಿ ಎಂದು ಹೇಳುತ್ತೀರಿ, ಇನ್ನೊಂದು ಕಡೆಗೆ ಕಾಡನ್ನು ಕಡೆಗಣಿಸುತ್ತೀರಿ. ನಾನು ನಿನ್ನೆ ತಾನೇ ಲಕ್ಕವಳ್ಳಿಗೆ ಹೋಗಿದ್ದು ಬಂದೆ. ಕಾಡಿಗೆ ಬೆಂಕಿ ಹಚ್ಚಿ ಬುಡಗಳನ್ನು ಒಣಗಿಸಿದ್ದಾರೆ, ಇದನ್ನು ಬೇರೆ ಯಾರು ಮಾಡುತ್ತಾರೆ, ಸಾರ್ವಜನಿಕರು ಮಾಡುತ್ತಾರೆಯೇ? ಕಾಡಿಗೆಬೇಲಿ ಇದೆ, ಗಾರ್ಡ್ಸ್ ಇದ್ದಾರೆ, ರೇಂಜರ್ಸ್ ಇದ್ದಾರೆ ಯಾರು ಬೆಂಕಿ ಹಚ್ಚುತ್ತಾರೆ? ಮರಗಳ ಬುಡಗಳನ್ನು ಸುಡುವುದು ಕಾಡನ್ನು ಒಣಗಿಸುವುದು, ಮರಗಳನ್ನು ಕಡಿಯುವುದು ಮಾಡುತ್ತಿದ್ದಾರೆ, ಇದನ್ನು ಕಳ್ಳ ಸಾಗಾಣಿಕೆದಾರರು ಮಾಡುತ್ತಿದ್ದಾರೆ. ಇದು ಕಳ್ಳ ಸಾಗಾಣಿಕೆದಾರರ ಕೃತ್ಯ, ಇದರಲ್ಲಿ ಅಧಿಕಾರಿಗಳೂ ಕೂಡಾ ಶಾಮೀಲಾಗಿದ್ದಾರೆ. ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದನ್ನು ತಡೆಗಟ್ಟಿದರೆ ಕರ್ನಾಟಕ ರಾಜ್ಯದ ಜನತೆಗೆ ದೊಡ್ಡ ಉಪಕಾರ ಮಾಡಿದಹಾಗೆ ಆಗುತ್ತದೆ ಎಂಬ ವಿಚಾರ ಹೇಳುತ್ತಾ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆ ಬಗ್ಗೆ ಚರ್ಚೆಯನ್ನು ಪ್ರಾರಂಭಿಸುತ್ತಾ ಹಿರಿಯ ಸದಸ್ಯರಾದ ಹಾಗೂ ಹಿಂದಿನ ಸಚಿವರಾದಂಥ ಮಾನ್ಯ ಕೆ.ಹೆಚ್. ಪಾಟೀಲರು ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಕರ್ನಾಟಕದಲ್ಲಿರುವಂಥ ಅರಣ್ಯ ದೇಶದಲ್ಲೇ ಬಹಳ ಒಳ್ಳೆಯದು ಎಂಬ ಮಾತನ್ನು ಹೇಳಿದ್ದಾರೆ. ಅವರಿಗೆ ಪ್ರಥಮವಾಗಿ ನನ್ನ ಧನ್ಯವಾದಗಳು. ಎರಡನೆಯದಾಗಿ, ಕೆಲವು ಸೂಚನೆಗಳನ್ನು ಕೂಡಾ ಅವರು ಕೊಟ್ಟಿದ್ದಾರೆ. ಮುಖ್ಯವಾಗಿ ಅವರು ಕೊಟ್ಟಂತಹ ಸೂಚನೆಗಳಲ್ಲಿ ಈ ಕಾಯಿದೆಯಿಂದ ಏನು ಅಧಿ

ಕಾರವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ ಆ ಅಧಿಕಾರ ದುರುಪಯೋಗ ಆಗಬಾರದು ಎಂಬ ಮಾತನ್ನು ಹೇಳಿದ್ದಾರೆ. ಆ ಸೂಚನೆಯನ್ನು ನಾನು ಗಮನದಲ್ಲಿಡುತ್ತೇನೆ, ಅಷ್ಟೇ ಅಲ್ಲ ಈ ಕಾಯಿದೆಯಿಂದ ಯಾವುದೇ ರೀತಿಯ ಅಧಿಕಾರದುರುಪಯೋಗ ಆಗದಹಾಗೆ ನೋಡಿಕೊಳ್ಳುತ್ತೇನೆ ಎಂಬ ಭರವಸೆಯನ್ನು ತಮ್ಮ ಮುಖೇನ ಅವರಿಗೆ ಕೊಡಬಯಸುತ್ತೇನೆ. ಇದರ ಜೊತೆಗೆ ಅರಣ್ಯದಿಂದ ಬರಬೇಕಾದ ಬಾಕಿಯನ್ನು ಸೂಟಿ ಬಿಡುವ ಸಲುವಾಗಿ ಈ ಕಾಯಿದೆಯನ್ನು ಉಪಯೋಗ ಮಾಡುತ್ತೀರಾ ಎಂಬ ಮಾತನ್ನು ಕೇಳಿದ್ದಾರೆ. ಇದರ ಬಗ್ಗೆ ಅವರು ಯೋಚಿಸುವಂತಹ ಸಂದರ್ಭ ಇಲ್ಲ. ಯಾವುದೇ ಬಾಕಿಯನ್ನು ಈ ಕಾಯಿದೆ ಮುಖಾಂತರವಾಗಲೀ, ಬೇರೆ ಕಾಯಿದೆ ಮುಖಾಂತರವಾಗಲೀ ಸೂಟಿ ಬಿಡುವ ವಿಷಯ ಸರಕಾರದ ಮುಂದೆ ಇಲ್ಲ. ಎಲ್ಲಾ ಬಾಕಿಯನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನೂ ಕೂಡಾ ನಾನು ಗಂಭೀರವಾಗಿ ಪರಿಗಣಿಸುತ್ತೇನೆ ಎಂಬ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ನೀಲಗಿರಿ ಬೆಳೆ ಅಧಿಕವಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ನೀಲಗಿರಿ ಬೆಳೆಯನ್ನು ಕಡಿಮೆ ಮಾಡಿದ್ದೇವೆ.

-ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರು ಸಹ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅವೆಲ್ಲವನ್ನು ಕೂಡ ನಾನು ಬಹಳ ಗಂಭೀರವಾಗಿ ಪರಿಗಣಿಸುತ್ತೇನೆ. ಇದರ ಜೊತೆಗೆ ನೀಲಗಿರಿ ಬೆಳೆ ಬಹಳ ಅತಿಯಾಯಿತು ಎನ್ನುವ ಮಾತನ್ನು ಸಹ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೆ. ಹೆಚ್. ಪಾಟೀಲರವರು ಹೇಳಿದ್ದಾರೆ. ಈಗ ನೀಲಗಿರಿ ಮರಗಳನ್ನು ಬೆಳೆಸುವುದು ನಾವು ಕಡಿಮೆ ಮಾಡಿದ್ದೇವೆ, ಶೇಕಡ ೨೦ ಪರ್ಸೆಂಟ್ ನೀಲಗಿರಿ ಮರಗಳನ್ನು ಮಾತ್ರ ನಾವು ಈಗ ಬೆಳೆಸುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ ಈ ನೀಲಗಿರಿ ಮರಗಳನ್ನು ಶೇಕಡ ೯೦ ಪರ್ಸೆಂಟ್‌ನಷ್ಟು ಬೆಳೆಸುತ್ತಿದ್ದಾರೆ. ಇನ್ನು ಕೆಲವು ಜನ ಮಾನ್ಯ ಸದಸ್ಯರಲ್ಲಿ ಒಂದು ಅಭಿಪ್ರಾಯವಿದೆ. ಅದೇನೆಂದರೆ, ನಾವು ನೀಲಗಿರಿ ಮರಗಳನ್ನು ಬೆಳೆಸಿ ಹರಿಹರ ಪಾಲಿಫೈಬರ್ಸ್‌ರವರಿಗೆ ಕೊಡುತ್ತಿದ್ದೇವೆಂದು. ಆದರೆ ಈ ಬಗ್ಗೆ ನಾನು ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ, ೧೯೭೪ ರಿಂದ ಈಚೆಗೆ ಅರಣ್ಯ ಇಲಾಖೆಯಲ್ಲಿ ಬೆಳೆಯತಕ್ಕಂಥ ಯಾವುದೇ ಬೆಳೆಯನ್ನು ನಾವು ಅವರಿಗೆ ಕೊಡುತ್ತಿಲ್ಲ. ಅರಣ್ಯ ಇಲಾಖೆಯಲ್ಲಿ ಬೆಳೆದಂತಹ ಮರಗಳನ್ನು ಜನರಿಗೆ ಶೇ ೬೦ ರಷ್ಟು ಕಡಿಮೆ ಬೆಲೆಗೆ ಉರವಲು ಸೌಧೆಗಾಗಿ ಕೊಡುತ್ತಿದ್ದೇವೆ ಇನ್ನು ಅರಣ್ಯ ಇಲಾಖೆಯಲ್ಲಿ ಕೆಲವು ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ಕೂಡ ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್ ಪಾಟೀಲ್‌ರವರು ಹೇಳಿದ್ದಾರೆ. ಅದರಲ್ಲಿ ವಿಶೇಷವಾದ ಯೋಜನೆಗಳು ಎಂದರೆ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವ ಗಾರ್ಡ್‌ಗಳಿಗೆ ಮನೆಯನ್ನು ಕಟ್ಟಿಸಿಕೊಡುವುದು, ಅವರಿಗೆ ಅಕಳುಂಗಳನ್ನು ಕೊಡುವುದು. ಈ ಬಗ್ಗೆ ನಾವು ಕೂಡ ಪರಿಶೀಲನೆಯನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಗಾರ್ಡ್‌ಗಳಿಗೆ ನಾವು ಒಳ್ಳೆಯ ವೇತನವನ್ನು ಸಹ ಕೊಡುತ್ತಿದ್ದೇವೆ. ಆಮೇಲೆ ಗದಗ್‌ನಲ್ಲಿರತಕ್ಕಂಥ ಕಪ್ಪಟಗುಡ್ಡವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಕೂಡ ಹೇಳಿದ್ದಾರೆ. ಮತ್ತು ಗದಗ್‌ನಲ್ಲಿ ಜೂ: (ಪ್ರಾಣಿ ಸಂಗ್ರಹಾಲಯ) ಸುಧಾರಣೆಯಾಗಬೇಕೆನ್ನುವ ಮಾತನ್ನು ಸಹ ಹೇಳಿದ್ದಾರೆ. ಅವರು ನನಗೆ ಒಂದು ಪತ್ರವನ್ನು ಸಹ ಬರೆದಿದ್ದಾರೆ. ತದನಂತರ ನಾನು ಗದಗ್‌ಗೆ ಭೇಟಿ ಕೊಟ್ಟು ಅಲ್ಲಿರತಕ್ಕಂಥ ಪ್ರಾಣಿ ಸಂಗ್ರಹಾಲಯವನ್ನು ನೋಡಿಕೊಂಡು ಬಂದಿದ್ದೇನೆ, ಆ ಪ್ರಾಣಿ ಸಂಗ್ರಹಾಲಯ ಬಹಳ ಚೆನ್ನಾಗಿದೆ. ಆದ್ದರಿಂದ ಆ ಪ್ರಾಣಿ ಸಂಗ್ರಹಾಲಯದ ಬೆಳವಣಿಗೆಗೆ ಸೂಕ್ತ ಏರ್ಪಾಡು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ಬಗ್ಗೆ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಹಂತ ಹಂತವಾಗಿ ಕ್ರಮಕೈಗೊಳ್ಳುತ್ತೇನೆ ಎನ್ನುವ ಮಾತನ್ನು ಸಹ ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಅದೇ ಪ್ರಕಾರ ಕಪ್ಪಟಗುಡ್ಡ ಬೆಳವಣಿಗೆಗೆ ಕೂಡ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಶ್ರೀಮಾನ್ ಆಚಾರ್‌ರವರು ಮಾತನಾಡುತ್ತಾ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಸೂಚನೆಗಳಲ್ಲಿ ಬಹಳ ಮುಖ್ಯವಾದ ಸೂಚನೆ ಎಂದರೆ ಹಾವು ಸಾಕಲು ಶ್ರೀಮಾನ್ ಐತಾಳ್‌ರವರಿಗೆ ಪರವಾನಿಗೆಯನ್ನು ಕೊಡಬೇಕೆನ್ನುವ ಮಾತನ್ನು ಹೇಳಿದ್ದಾರೆ. ಅರಣ್ಯ ಇಲಾಖೆಯ ಕಾಯ್ದೆಯಲ್ಲಿ ಅದಕ್ಕೆ ಅವಕಾಶವಿರುವುದಿಲ್ಲ. ಹಾವು ಆಗಲಿ ಅಥವಾ ಇನ್ಯಾವುದೇ ಪ್ರಾಣಿಗಳನ್ನು ಸಾಕುವುದಕ್ಕೆ ಅರಣ್ಯ ಇಲಾಖೆಯ ಕಾಯ್ದೆಯಲ್ಲಿ ಅವಕಾಶ ವಿರುವುದಿಲ್ಲ. ಆದರೆ ಶ್ರೀಮಾನ್ ಐತಾಳ್‌ರವರು ಹಾವುಗಳ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಆದರೂ ಸಹ ಕಾಯ್ದೆಯ ಚೌಕಟ್ಟಿನಲ್ಲಿ ಅವಕಾಶವಿದ್ದರೆ ನಾನು ಅದನ್ನು ಸಹಾನು

ಭೂತಿಯಿಂದ ಪರಿಶೀಲನೆ ಮಾಡುತ್ತೇನೆ. ಇನ್ನು ಶ್ರೀಮಾನ್ ಸ್ವಾಮಿರಾವ್‌ರವರು ಮಾತನಾಡುತ್ತಾ ಅರಣ್ಯ ಇಲಾಖೆಯಲ್ಲಿ ಮರಗಳನ್ನು ಕಡಿದು ಹಾಕುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅರಣ್ಯಗಳಲ್ಲಿ ಮರಗಳನ್ನು ಕಡಿಯಲು ಅರಣ್ಯ ಇಲಾಖೆಯ ಅಧಿಕಾರಿಗಳೇ ಕಾರಣ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಎಲ್ಲಾ ಇಲಾಖೆಗಳಲ್ಲಿ ಇರುವಂತೆ ಅರಣ್ಯ ಇಲಾಖೆಯಲ್ಲಿ ಕೂಡ ಒಳ್ಳೆಯ ಅಧಿಕಾರಿಗಳಿದ್ದಾರೆ. ಆದರೆ ಒಳ್ಳೆಯವರಲ್ಲದ ಅಧಿಕಾರಿಗಳು ಸಹ ಇದ್ದಾರೆ. ಯಾವುದೇ ಅಧಿಕಾರಿ ತಪ್ಪು ಮಾಡಿದಾಗ ಆ ಬಗ್ಗೆ ಸರಿಯಾದ ಮಾಹಿತಿಯನ್ನು ನನಗೆ ಕೊಟ್ಟರೆ, ನಿರ್ದಾಕ್ಷಿಣ್ಯವಾಗಿ ನಾನು ಕ್ರಮ ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಅವರು ಪ್ರಸ್ತಾಪ ಮಾಡಿದ ಎಲ್ಲಾ ವಿಚಾರಗಳನ್ನು ನಾನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಆಮೇಲೆ ಕರೆಂಟ್ ಕಂಬಗಳ ಪರವಾನಗೆ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ನಾನು ಹೇಳುವುದೇನೆಂದರೆ, ಕೇಂದ್ರ ಸರ್ಕಾರದ ಮಂಜೂರಾತಿ ಇಲ್ಲದೆ ಯಾವುದೇ ಕೆಲಸವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇನ್ನು ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಸವಲಿಂಗಪ್ಪನವರು ಮಾತನಾಡುತ್ತಾ ಕೆಲವು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಅರಣ್ಯ ಇಲಾಖೆ ಒಂದು ಸಸ್ಯಶಾಮಲವಾಗಬೇಕೆಂದು ಹೇಳಿದ್ದಾರೆ. ಜೊತೆಗೆ ಅವರು ಕೊಟ್ಟಂತಹ ಎಲ್ಲಾ ಸಲಹೆ ಸೂಚನೆಗಳನ್ನು ನಾನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಮತ್ತು ಕರ್ನಾಟಕ ರಾಜ್ಯದಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಎನ್ನುವ ಮಾತನ್ನು ನಾನು ಅವರಿಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮಾನ್ಯ ಸದಸ್ಯರಾದಂಥ ಶ್ರೀಮಾನ್ ಚಿನ್ನಪ್ಪನವರು ಮಾತನಾಡುತ್ತಾ ಕೆಲವು ಅಧಿಕಾರಿಗಳ ಬಗ್ಗೆ, ಗೇಣಿ ಮನೆ ಬಗ್ಗೆ ಮತ್ತು ದೇವರಕಾಡಿನ ಬಗ್ಗೆ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಸಲಹೆಗಳನ್ನು ನಾನು ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳುತ್ತೇನೆ. ಇನ್ನು ಕೆಲವು ನಿರ್ದಿಷ್ಟ ವಿಚಾರಗಳ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನನಗೆ ಮಾಹಿತಿ ಕೊಟ್ಟರೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಇನ್ನು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ೩೦೦ ರೂಪಾಯಿಗಳ ಸಂಬಳ ಕೊಟ್ಟು ೪೦೦ ರೂಪಾಯಿಗಳಿಗೆ ಸಹಿ ಪಡೆದುಕೊಳ್ಳುತ್ತಿದ್ದಾರೆ ಎನ್ನುವ ಮಾತನ್ನು ಸಹ ಹೇಳಿದರು, ಆ ಬಗ್ಗೆ ಕೂಡ ಮಾಹಿತಿ ಕೊಟ್ಟರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ಸೊರ್ಕೆಯವರು, ಅರಣ್ಯಕ್ಕೆ ಬೆಂಕಿ ಹಚ್ಚಿರುವ ವಿಷಯದ ಬಗ್ಗೆ ಹೇಳಿದ್ದಾರೆ, ಹಾಗೂ ಅರಣ್ಯದ ಬಗ್ಗೆ ಯಾವುದೇ ಸೂಚನೆಗಳೂ ಬಂದರೂ ಜಿಲ್ಲಾಪರಿಷತ್ತಿನವರು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿಲ್ಲವೆಂದು ಹೇಳಿದ್ದಾರೆ. ಯಾರು ಅರಣ್ಯಕ್ಕೆ ಬೆಂಕಿ ಹಚ್ಚುತ್ತಾರೋ ಅಂಥವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ.—ಅರಣ್ಯಕ್ಕೆ ಬೆಂಕಿ ಇಟ್ಟಿದ್ದ ಬಗ್ಗೆ ಜಿಲ್ಲಾಪರಿಷತ್ತಿನಲ್ಲಿ ಚರ್ಚೆ ಮಾಡಕೂಡದೆಂದು ತಮ್ಮ ಇಲಾಖೆವತಿಯಿಂದ ಒಂದು ಆದೇಶ ಬಂದಿದೆ. ಅರಣ್ಯಕ್ಕೆ ಬೆಂಕಿ ಬಿದ್ದ ಬಗ್ಗೆ ಜಿಲ್ಲಾಪರಿಷತ್ತಿನಲ್ಲಿ ಏಕೆ ಚರ್ಚೆ ಮಾಡಬಾರದೆಂದು ನಿರ್ದೇಶನ ಕೊಟ್ಟಿದ್ದೀರೆಂಬುದನ್ನು ಹೇಳಬೇಕು.

ಶ್ರೀ ಜಿ. ಎಸ್. ಬಾಗಲಕೋಟೆ.—ಮಾನ್ಯ ಸದಸ್ಯರಾದ ಶ್ರೀ ಸೊರ್ಕೆಯವರು ಹೇಳಿದ ಹಾಗೆ ಆ ರೀತಿ ಏನಾದರೂ ಅರಣ್ಯ ಇಲಾಖೆಯಿಂದ ನಿರ್ದೇಶನ ಹೋಗಿದ್ದರೆ, ಅದು ತಪ್ಪು. ಯಾರು ಆ ತರಹ ಸೂಚನೆ ಕೊಟ್ಟಿದ್ದಾರೆ ಎಂಬುದನ್ನು ದಯವಿಟ್ಟು ನನ್ನ ಗಮನಕ್ಕೆ ತರಬೇಕೆಂದು ಹೇಳಬಯಸುತ್ತೇನೆ. ಆ ಮೇಲೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಶಿವನಂಜಪ್ಪನವರು ಕೆಲವು ಕಾಯಿದೆ ತೊಂದರೆಗಳನ್ನು ಹೇಳಿದ್ದಾರೆ. ಇಂಡಿಯನ್ ಕಾಂಟ್ರಾಕ್ಟ್ ಆ್ಯಕ್ಟ್ ಪ್ರಕಾರ ಕಾಯಿದೆಗೆ ತೊಂದರೆಯಾಗುತ್ತದೆಂದು ತಿಳಿಸಿದ್ದಾರೆ. ಕಾಯಿದೆ ಪಾಸ್ ಆದ ನಂತರ ರಾಷ್ಟ್ರಪತಿಯವರ ಮಂಜೂರಾತಿಗಾಗಿ ಹೋಗುತ್ತದೆ. ೧೯೮೪ರಲ್ಲಿ ಆರ್ಡಿನೆನ್ಸ್ ತಂದಾಗಲೂ ಸಹ ರಾಷ್ಟ್ರಪತಿಯವರು ಮಂಜೂರು ಕೊಟ್ಟಿದ್ದಾರೆ. ಆದ್ದರಿಂದ ಕಾಯಿದೆಗೆ ತೊಂದರೆ ಬರುವುದಿಲ್ಲವೆಂದು ನನ್ನ ಅಭಿಪ್ರಾಯ. ಆಮೇಲೆ, ಸಿದ್ದನ ಬೆಟ್ಟದ ಕಾಡನ್ನು ಬೆಳೆಸಬೇಕೆಂದು ಹೇಳಿದ್ದಾರೆ, ಹಾಗೂ ರಸ್ತೆಗಳಲ್ಲಿ ಹುಣಿಸೆ, ಮಾವು, ಬೇವು ಮುಂತಾದ ಮರಗಳನ್ನು ಬೆಳೆಸಬೇಕೆಂದು ಸಹ ಸೂಚಿಸಿದ್ದಾರೆ. ಇವರು ಕೊಟ್ಟಂಥ ಎಲ್ಲಾ ಸೂಚನೆಗಳನ್ನೂ ಗಮನದಲ್ಲಿ ಇಟ್ಟುಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಸಚಿವರು ಒಂದು ನಿಮಿಷ ಯೀಲ್ಡ್ ಆಗುವ ಹಾಗಿದ್ದರೆ, ಒಂದು ಮಾತನ್ನು ಹೇಳುತ್ತೇನೆ. ಕಾಡನ್ನು ಕಡಿಸತಕ್ಕಂಥವರ ಜೊತೆಯಲ್ಲಿ ಅಧಿಕಾರಿಗಳು ಇನ್‌ವಾಲ್ವ್

ಆಗಿದ್ದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಕೇರಳ ಬಾರ್ಡರಲ್ಲಿ ಚಾರ್ಜ್ ಎನ್ನುವ ಕುಟುಂಬದವರು ಆನೆಗಳನ್ನು ಸಾಯಿಸುವುದಲ್ಲದೇ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವ ಕಾಡನ್ನು ಹಾಳು ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವಿವರವಾಗಿ ವರದಿ ಬಂದಿತ್ತು. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡ್ದೀರಿ ? ಐರನ್ ಓರ್ ಮತ್ತು ಮ್ಯಾಂಗನೀಸ್ ಓರ್‌ಗಳನ್ನು ತೆಗೆಯುವುದಕ್ಕೆ ಕಾಡುಗಳನ್ನು ೧೦ ವರ್ಷಗಳ ಕಾಲ, ೨೦ ವರ್ಷಗಳ ಕಾಲ ಗುತ್ತಿಗೆಗೆ ಕೊಡಲಾಗಿದೆ. ಐರನ್ ಓರ್ ಅಥವಾ ಮ್ಯಾಂಗನೀಸ್ ಓರನ್ನು ತೆಗೆಯುವುದಕ್ಕೆ ಅಲ್ಲಿದ್ದ ಮರಗಳನ್ನು ಕಡಿದಾದ ಮೇಲೆ ಪುನಃ ಆ ಜಮೀನನ್ನು ಮಟ್ಟ ಮಾಡಿ, ಆ ಜಾಗಗಳಲ್ಲಿ ಮರಗಳನ್ನು ಬೆಳೆಸಬೇಕೆಂದು ಒಂದು ಕಂಡೀಷನ್‌ನ್ನು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿನವರು ಹಾಕಿರುತ್ತಾರೆ. ಆದರೆ, ಅದಿರುಗಳನ್ನು ತೆಗೆದ ನಂತರ ಮರಗಳನ್ನು ಬೆಳೆಸುವ ಬಗ್ಗೆ ಯಾವ ಕಂಟ್ರಾಕ್ಟುದಾರನೂ ಪ್ರಯತ್ನ ಮಾಡಿಲ್ಲ. ಇಂಥ ಕಂಟ್ರಾಕ್ಟರುಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಎಸ್. ಬಾಗಲಕೋಟೆ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಕೇರಳಾ ಬಾರ್ಡರ್‌ನಲ್ಲಿ ಮರಗಳ ಮತ್ತು ಆನೇಗಳ ಕಳ್ಳಸಾಗಾಣಿಕೆ ಆಗಿರುವ ಬಗ್ಗೆ, ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಯಂ. ಭೂಪತಿ.—ಆಗ ನೀವು ಅರಣ್ಯ ಮಂತ್ರಿಗಳಾಗಿರಲಿಲ್ಲ. ೭೦ ಪರ್‌ಸೆಂಟ್ ಕಾಡು ನಾಶವಾದ ಮೇಲೆ ನೀವು ಅರಣ್ಯ ಮಂತ್ರಿಗಳಾಗಿದ್ದೀರಿ.

ಶ್ರೀ ಜಿ. ಎಸ್. ಬಾಗಲಕೋಟೆ.—ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಹಾಗೂ ಕಾಡನ್ನು ನಾಶ ಮಾಡಿರುವ ಜಾಗದಲ್ಲಿ ಮರಗಳನ್ನು ಬೆಳೆಸುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಯಂ. ಭೂಪತಿ.—ಮೈನ್ಸ್ ಅಂಡ್ ಜಿಯಾಲಜಿ ಕಛೇರಿಯವರು ಜಮೀನನ್ನು ಲೀಸ್ ಕೊಟ್ಟಮೇಲೆ, ಅರಣ್ಯವನ್ನು ನಾಶ ಮಾಡಿ ಮರಗಳನ್ನು ಪುನಃ ಬೆಳೆಸದೇ ಇದ್ದವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಇದರ ಬಗ್ಗೆ ನಾನು ಮುಖ್ಯ ಮಂತ್ರಿಯವರಿಗೆ ಪತ್ರ ಬರೆದಿದ್ದೆ. ನೂರಕ್ಕೆ ನೂರರಷ್ಟು ಕಂಟ್ರಾಕ್ಟದಾರರು ಮರಗಳನ್ನು ಬೆಳೆಸಿಲ್ಲ. ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯಾಗಲೀ, ಫಾರೆಸ್ಟ್ ಡಿಪಾರ್ಟ್‌ಮೆಂಟಿನವರಾಗಲೀ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿಲ್ಲ ಅರಣ್ಯ ನಾಶ ಮಾಡಿದ ಮೇಲೆ ಮಳೆ ಇಲ್ಲದಂತಾಗಿದೆ.

ಶ್ರೀ ಜಿ.ಎಸ್. ಬಾಗಲ್‌ಕೋಟ್.—ಸನ್ಮಾನ್ಯ ಅಧ್ಯಕ್ಷರೇ, ೧೯೮೦ನೇ ಸಾಲಿನ ನಂತರ ಮೈನ್ಸ್‌ಗಳಿಗಾಗಲೀ, ಅಥವಾ ಬೇರೆ ಯಾವುದೇ ಕೆಲಸಕ್ಕಾಗಿರಲಿ ಅರಣ್ಯಭೂಮಿಯನ್ನು ಲೀಸ್ ಮೇಲೆ ಕೊಡುವುದಕ್ಕಾಗುವುದಿಲ್ಲ, ಮತ್ತು ಹಾಗೆ ಸರಕಾರದವರು ಕೊಡುವುದೂ ಇಲ್ಲ. ಒಂದು ವೇಳೆ ಈ ಕಾನೂನಿಗೆ ವಿರುದ್ಧವಾಗಿ ಏನಾದರೂ ಅಕ್ರಮಗಳು ಆಗಿದ್ದರೆ, ಆ ಬಗ್ಗೆ ನಿರ್ದಿಷ್ಟ ಪ್ರಕರಣಗಳನ್ನು ಯಾರಾದರೂ ಕೊಟ್ಟರೆ ಅದನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇಲಾಖೆಯವರು ಈ ಹಿಂದೆ ಕೆಲವರಿಗೆ ೩-೪-೫ ಸಾವಿರ ಎಕರೆ ಜಮೀನುಗಳನ್ನು ಲೀಸ್ ಮೇಲೆ ಕೊಟ್ಟಿದ್ದಾರೆ. ಅವರು ಸಂಬಂಧಪಟ್ಟ ನಿಯಮಗಳನ್ನು ಉಲ್ಲಂಘನೆ ಮಾಡಿದ್ದರೆ, ಹಾಗೆ ಉಲ್ಲಂಘನೆ ಮಾಡಿದವರ ಜಮೀನುಗಳನ್ನು ಕ್ಯಾನ್ಸಲ್ ಮಾಡುತ್ತೀರಾ ?

ಶ್ರೀ ಜಿ.ಎಸ್. ಬಾಗಲ್ಕೋಟ್.—ಹಾಗೆ ಯಾರಾದರೂ ನಿಯಮಗಳನ್ನು ಉಲ್ಲಂಘನೆ ಮಾಡಿದ್ದರೆ ಹಾಗೂ ನಿರ್ದಿಷ್ಟವಾದ ಪ್ರಕರಣಗಳನ್ನು ಗಮನಕ್ಕೆ ತಂದರೆ ಅಂತಹವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಜಮೀನನ್ನು ಅವರಿಗೆ ಲೀಸ್ ಮೇಲೆ ಕೊಟ್ಟಿದ್ದೀರಿ. ಅಂತಹವರು ಏನಾದರೂ ಸಂಬಂಧಪಟ್ಟ ನಿಯಮಗಳನ್ನು ಉಲ್ಲಂಘನೆ ಮಾಡಿದ್ದರೆ, ಆ ಜಮೀನನ್ನು ವಜಾ ಮಾಡುತ್ತೀರಾ.

ಶ್ರೀ ಜಿ.ಎಸ್. ಬಾಗಲ್ಕೋಟ್.—ಮಾನ್ಯ ಸದಸ್ಯರು ಆ ಬಗ್ಗೆ ನಿರ್ದಿಷ್ಟವಾದ ಉದಾಹರಣೆಗಳನ್ನು ಕೊಟ್ಟರೆ ಆ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆಯಲ್ಲಿ ಬೇಕಾದಷ್ಟು ಜನ ಅಧಿಕಾರಿಗಳು ಇದ್ದಾರೆ. ಅವರಿಗೆ ಈ ರೀತಿಯಾಗಿ ಜಮೀನನ್ನು ಯಾರ್ಯಾರಿಗೆ ಕೊಟ್ಟಿದ್ದಾರೆ, ಹಾಗೆ

ಕೊಟ್ಟವರಲ್ಲಿ, ಯಾರ್ಯಾರು ನಿಯಮಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂಬುದೂ ಕೂಡ ಅವರಿಗೆ ಇಲಾಖಾ ಅಧಿಕಾರಿಗಳಾಗಿರುವುದರಿಂದ ಗೊತ್ತಾಗಿರುತ್ತದೆ. ಹಾಗೆ ಉಲ್ಲಂಘನೆ ಮಾಡಿದವರ ಮೇಲೆ ನೀವೇ ಕ್ರಮ ತೆಗೆದುಕೊಳ್ಳಬೇಕು. ಆ ಕೆಲಸ ನಿಮ್ಮದು. ನಾವುಗಳು ಹೇಳಬೇಕಾಗಿಲ್ಲ ಎಂದು ನನಗನ್ನಿಸುತ್ತದೆ. ಮೊದಲು ಅಧಿಕಾರಿಗಳಿಂದ ವಿಷಯ ತಿಳಿದು ಕ್ರಮ ತೆಗೆದುಕೊಳ್ಳಿ.

ಶ್ರೀ ಜಿ.ಎಸ್. ಬಾಗಲ್ಕೋಟ್.—ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರು ಒಳ್ಳೆಯ ಸೂಚನೆಯನ್ನು ಮಾಡಿದ್ದಾರೆ. ಆ ಬಗ್ಗೆ ನಾನು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಯಂ. ಭೂಪತಿ.—ತಾವುಗಳು ಮೈನ್ಸ್‌ನವರಿಗೆ ಕೆಲವು ಕಡೆಗಳಲ್ಲಿ ಅರಣ್ಯ ಭೂಮಿಯನ್ನು ಕೊಟ್ಟಿದ್ದೀರಿ. ಅಂತಹ ಮೈನ್ಸ್ ಏರಿಯಾದಲ್ಲಿ ಅರಣ್ಯವನ್ನು ಹಾಳು ಮಾಡಿರತಕ್ಕಂಥ ಜನರು ಇದ್ದಾರೆ. ನೀವು ರಿಸರ್ವ್ ಫಾರೆಸ್ಟನ್ನು ಲೀಸ್ ಮೇಲೆ ಈಗ ಕೊಡುತ್ತಾ ಇಲ್ಲ. ಆದರೆ ಮೊದಲು ಕೊಟ್ಟಿರತಕ್ಕಂಥ ಏರಿಯಾದಲ್ಲಿ ಫಾರೆಸ್ಟ್ ಬೇಕಾದಷ್ಟು ಇತ್ತು. ಹೀಗೆ ಮೈನ್ಸ್ ತೆಗೆಯುವಂತಹ ಕಾಲದಲ್ಲಿ ಅರಣ್ಯ ಇತ್ತು. ಹೀಗೆ ಮೈನ್ಸ್ ತೆಗೆಯುವಾಗ ನಾಶವಾದಂತಹ ಅರಣ್ಯವನ್ನು ಕೆಲಸ ಮುಗಿಸಿದ ಮೇಲೆ ಆ ಜಾಗದಲ್ಲಿ ಹೊಸದಾಗಿ ಮರಗಳನ್ನು ಬೆಳೆಸಬೇಕೆಂಬ ಒಂದು ನಿಯಮ ಇದ್ದೇ ಇದೆ. ಆದರೆ ಹೀಗೆ ನಾಶವಾದ ಅರಣ್ಯದ ಜಾಗದಲ್ಲಿ ಪುನಃ ಗಿಡ—ಮರಗಳನ್ನು ಬೆಳೆಸಬೇಕೆಂಬ ನಿಯಮಗಳನ್ನು ಯಾವ ಗಣಿ ಮಾಲೀಕನೂ ಪಾಲನೆ ಮಾಡಿಲ್ಲ ಎಂದು ಕಾಣುತ್ತದೆ. ಅಂತಹವರ ಮೇಲೆ ತಾವುಗಳು ಈಗ ಕಾನೂನಿನ ಕ್ರಮಗಳನ್ನು ತೆಗೆದುಕೊಳ್ಳುತ್ತೀರಾ? ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಪತ್ರವನ್ನು ಹಿಂದೆ ಬರೆದಿದ್ದೆನು. ಅದನ್ನು ಅವರು ಉತ್ತರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಹೇಳಿದ್ದರು. ಆ ಬಗ್ಗೆ ತಾವುಗಳು ಏನು ಅಭಿಪ್ರಾಯವನ್ನು ಹೇಳುತ್ತೀರಿ?

ಶ್ರೀ ಜಿ.ಎಸ್. ಬಾಗಲ್ಕೋಟ್.—ಮಾನ್ಯ ಸದಸ್ಯರು ಹೇಳಿದ ವಿಚಾರದಲ್ಲಿ ಸೂಕ್ತ ವಿಚಾರಣೆ ನಡೆಸಿ, ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಹೊಸದಾಗಿ ಮಾನ್ಯ ಅರಣ್ಯ ಮಂತ್ರಿಗಳು ಬರುವಾಗ ಶೇಕಡಾ ೭೫ರಷ್ಟು ಅರಣ್ಯವು ನಾಶವಾಗಿ ಹೋಗಿದೆ. ೨೫ರಷ್ಟು ಮಾತ್ರ ಉಳಿದಿದೆ

ನಾವುಗಳು ಈಗ ಸಣ್ಣ ಸಣ್ಣ ಮಕ್ಕಳಿಗೆ ಅರಣ್ಯದ ಮಹತ್ವವನ್ನು ಹೇಳಿಕೊಟ್ಟು ಅವರಿಂದ ಸಸಿಗಳನ್ನು ನೆಡಿಸತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಮಾಡುತ್ತಾ ಇದ್ದೇವೆ. ಹಾಗೆ ನಮ್ಮ ಮಕ್ಕಳು ನೆಟ್ಟಿರತಕ್ಕಂಥ ಸಸಿಗಳು ೨೦ ವರ್ಷಗಳಿಗೂ ಮೀರಿ ಬದುಕಿ ಉಳಿಯಬೇಕು. ಆಗ ಅದರ ಸಫಲತೆ ಬಂದೀತು. ಈಗಲೂ ಕೂಡ ನಾವುಗಳು ಇದ್ದ ಅರಣ್ಯವನ್ನು ಕಾಪಾಡಿಕೊಳ್ಳುವತ್ತ ನಮ್ಮ ಗಮನವನ್ನು ಸರಿಯಾಗಿ ಹರಿಸುತ್ತಾ ಇಲ್ಲ. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಈಗಲೂ ಮರಗಳನ್ನು ದೊಡ್ಡ ಪ್ರಮಾಣದಲ್ಲಿ ಕಳ್ಳಸಾಗಾಣಿಕೆದಾರರು ಕಡಿದು ನಾಶಮಾಡುತ್ತಾ ಇದ್ದಾರೆ. ಅದನ್ನು ಮುಚ್ಚಿಕೊಳ್ಳಲು ಕಡಿದ ನಂತರ ಅರಣ್ಯಕ್ಕೆ ಬೆಂಕಿ ಇಡುತ್ತಾ ಇದ್ದಾರೆ. ಇದು ಎಲ್ಲರಿಗೂ ತಿಳಿದ ವಿಚಾರ. ಇಂತಹವರ ಬಗ್ಗೆ ಶೀಘ್ರ ಹಾಗೂ ಸೂಕ್ತ ಗಮನವನ್ನು ಹರಿಸಿ, ಅಂಥಹವರು ಯಾರು ಎಂದು ಪತ್ತೆಹಚ್ಚಿ ಅವರ ಮೇಲೆ ಒಂದೆರಡು ಕಠಿಣ ಕ್ರಮಗಳನ್ನು ತೆಗೆದುಕೊಂಡರೆ ಕಳ್ಳಸಾಗಾಣಿಕೆದಾರರಿಗೂ ಮತ್ತು ಅರಣ್ಯ ಇಲಾಖೆಯ ಕೆಲವು ಅಧ್ಯಕ್ಷ ಹಾಗೂ ಅಪ್ರಮಾಣಿಕ ಸಿಬ್ಬಂದಿಯವರಿಗೂ ಹೆದರಿಕೆ ಉಂಟಾಗುತ್ತದೆ ಏಕೆಂದರೆ ಈ ಕಳ್ಳಸಾಗಾಣಿಕೆದಾರರ ಜೊತೆಗೆ ಇಲಾಖೆಯ ಕೆಲವು ಸಿಬ್ಬಂದಿಯವರು ಶಾಮೀಲಾಗಿ ಅಂತಹ ಅರಣ್ಯ ನಾಶ ಮಾಡುವವರಿಗೆ ಸಹಾಯವನ್ನು ಮಾಡುತ್ತಿದ್ದಾರೆ. ತಾವುಗಳು ಇಂತಹ ಪ್ರಕರಣಗಳನ್ನು ಸ್ವಲ್ಪ ಗಂಟಾಗಿ ಮಾಡಿ ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳಬೇಕು. ಆಗ ಈ ರೀತಿಯ ನಾಶವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ಅಂತಹ ಏನಾದರೂ ಯೋಜನೆಗಳನ್ನು ಕೈಗೊಳ್ಳುತ್ತೀರಾ?

ಶ್ರೀ ಜಿ.ಎಸ್. ಬಾಗಲ್ಕೋಟ್.—ಅರಣ್ಯ ನಾಶವಾಗುತ್ತಾ ಇರುವಂತಹ ವಿಷಯವನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ಮಾನ್ಯ ಸದಸ್ಯರು ಹೇಳಿದುದು ಸ್ವಲ್ಪ ಮಟ್ಟಿಗೆ ಸತ್ಯವೂ ಕೂಡ ಆಗಿರುತ್ತದೆ. ಈ ಬಗ್ಗೆ ಅರಣ್ಯ ಇಲಾಖೆಯು ಸೂಕ್ತ ಗಮನವನ್ನು ಹರಿಸಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇಲಾಖಾ ಸಿಬ್ಬಂದಿಗೆ ವೈರ್‌ಲೆಸ್ ಸೆಟ್, ಬಂದೂಕು, ವಾಕಿಟಾಕಿ,

ಇತ್ಯಾದಿ ಆವಶ್ಯಕ ಸಲಕರಣೆಗಳನ್ನು ಒದಗಿಸಿ ಕೊಟ್ಟು ಆ ಮೂಲಕ ಅರಣ್ಯನಾಶವನ್ನು ತಡೆಯುವಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅಂತೆಯೇ ಇಲಾಖಾ ಸಿಬ್ಬಂದಿಯವರ ಯಾರಾದರೂ ಇಂತಹ ಪ್ರಕರಣಗಳಲ್ಲಿ ಶಾಮೀಲಾದುದು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಾಗೂ ಅರಣ್ಯ ನಾಶ ಮಾಡುವ ಜನರನ್ನು ಕೂಡ ಪತ್ತೆ ಹಚ್ಚಿ ಅವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಮಂತ್ರಿಗಳು ಸಿಬ್ಬಂದಿಗೆ ಬೇಕಾದ ವಾಕಿಟಾಕಿ, ವೈರ್‌ಲೆಸ್ ಸೆಟ್. ಬಂದೂಕು ಮುಂತಾದುವುಗಳನ್ನು ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೆ ಈ ಸಿಬ್ಬಂದಿ ವರ್ಗದವರೇ ಕಳ್ಳಸಾಗಾಣಿಕೆದಾರರ ಜೊತೆ ಶಾಮೀಲಾಗಿದ್ದರೆ ಅಂತಹವರನ್ನು ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ರಲ್ಲಿ ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕ'' ವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕದ ಪರ್ಯಾಲೋಚಿಸುವುದು

ಖಂಡ 2 ರಿಂದ ೮

ಅಧ್ಯಕ್ಷರು.—ಪ್ರಸ್ತಾವವೇನೆಂದರೆ, ೨ ರಿಂದ ೮ರ ವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ ೨ ರಿಂದ ೮ರ ವರೆಗೆ ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.

ಪ್ರಸ್ತಾವ ಅಂಗೀಕಾರ

ಶ್ರೀ ಜಿ.ಎಸ್. ಬಾಗಲ್ಕೋಟ್ (ಅರಣ್ಯ ಮಂತ್ರಿಗಳು).—೧೯೮೭ರ ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕವನ್ನು ತಿದ್ದುಪಡಿ ಮಾಡುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು